# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 01.10.2015 ರಂದು ಅಧ್ಯಕ್ಷರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ರವರ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ 11.30 ಗಂಟೆಗೆ ನಡೆದ ಸಭೆಯ ನಡವಳಿಗಳು**

| ಕ್ರ. ಸಂ | ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1. | ರಾಜಣ್ಣ | – ಅಧ್ಯಕ್ಷರು | ಅಪರ ಆಯುಕ್ತರು (ಆಡಳಿತ) |
| 2. | ಜೆ.ಎಂ.ಸವಿತಾ ಮಾಯಣ್ಣ ಗೌಡ | – ಸದಸ್ಯರು | ಜಂಟಿ ಆಯುಕ್ತರು (ದಕ್ಷಿಣ) |
| 3. | ರಾಜೇಶ್ವರಿ ಚೋಳರಾಜ.ಕೆ | – ಸದಸ್ಯರು | ಜಂಟಿ ಆಯುಕ್ತರು (ಪೂರ್ವ) |
| 4. | ಸರಸ್ವತಮ್ಮ | – ಸದಸ್ಯರು | ಜಂಟಿ ಆಯುಕ್ತರು (ಮಹದೇವಪುರ) |
| 5. | ವಿ.ವಿ.ಸತ್ಯನಾರಾಯಣ | – ಸದಸ್ಯರು | ಜಂಟಿ ಆಯುಕ್ತರು (ಬೊಮ್ಮನಹಳ್ಳಿ) |
| 6. | ಹೇಮಲತಾ ಸತೀಶ್ ಸೇಠ್ | – ಸದಸ್ಯರು | ಜಂಟಿ ಆಯುಕ್ತರು (ಯಲಹಂಕ) |
| 7. | ಹೆಚ್.ಮಂಜುನಾಥ | – ಸದಸ್ಯರು | ಜಂಟಿ ಆಯುಕ್ತರು(ಆರ್.ಆರ್.ನಗರ) |
| 8. | ಆನಂದ್ ಕುಮಾರ್ | – ಸದಸ್ಯರು | ಜಂಟಿ ಆಯುಕ್ತರು (ದಾಸರಹಳ್ಳಿ) |
| 9. | ಪಿ.ವಿ.ಮಂಜುನಾಥ್(ಬಾಬು) | – ಸದಸ್ಯರು | ಅಪರ ಆಯುಕ್ತರು (ಕಲ್ಯಾಣ) |
| 10. | ಎಂ.ಎನ್.ಶ್ರೀಕಾಂತ್(ಪುಟ್ಟ) | – ಸದಸ್ಯರು | ಪ್ರಧಾನ ಅಭಿಯಂತರರು |
| 11. | ಬಿ.ಭದ್ರೇಗೌಡ | – ಸದಸ್ಯರು | ಕಾನೂನು ಕೋಶದ ಮುಖ್ಯಸ್ಥರು |
| | | | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| | | | ಉಪ ಆಯುಕ್ತರು (ಆಡಳಿತ) |
| | | | ಉಪ ನಿರ್ದೇಶಕರು (ತೋಟಗಾರಿಕೆ) |
| | | | ಉಪ ಆಯುಕ್ತರು (ಭೂಸ್ವಾಧೀನ)ಟಿ.ಡಿ.ಆರ್ |
| | | | ಉಪ ಆಯುಕ್ತರು (ತರಬೇತಿ ಮತ್ತು ಮಾನವ ಸಂಪನ್ಮೂಲ) |
| | | | ಮುಖ್ಯ ಆರೋಗ್ಯಾಧಿಕಾರಿಗಳು |
| | | | ಮುಖ್ಯ ಲೆಕ್ಕಾಧಿಕಾರಿಗಳು |
| | | | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು |
| | | | ಅಪರ ನಿರ್ದೇಶಕರು (ನಗರ ಯೋಜನೆ) |
| | | | ಜಂಟಿ ನಿರ್ದೇಶಕರು (ನಗರ ಯೋಜನೆ–ದಕ್ಷಿಣ ಮತ್ತು ಉತ್ತರ) |
| | | | ಆರೋಗ್ಯಾಧಿಕಾರಿ (ಪಶ್ಚಿಮ) |
| | | | ಆರೋಗ್ಯಾಧಿಕಾರಿ (ದಕ್ಷಿಣ) |
| | | | ಆರೋಗ್ಯಾಧಿಕಾರಿ (ಪೂರ್ವ) |
| | | | ಸಹಾಯಕ ನಿರ್ದೇಶಕರು ನಗರ ಯೋಜನೆ (ದಾಸರಹಳ್ಳಿ) |
| | | | ಸಹಾಯಕ ನಿರ್ದೇಶಕರು ನಗರ ಯೋಜನೆ (ಯಲಹಂಕ) |

ಸಹಾಯಕ ನಿರ್ದೇಶಕರು ನಗರ ಯೋಜನೆ
(ರಾಜರಾಜೇಶ್ವರಿನಗರ)
ಉಪ ಆಯುಕ್ತರು (ಪೂರ್ವ)
ಉಪ ಆಯುಕ್ತರು (ಪಶ್ಚಿಮ)

**<u>ಗೈರು ಹಾಜರಾಗಿದ್ದ ಅಧಿಕಾರಿಗಳು</u>**

ಅಪರ/ಜಂಟಿ ಆಯುಕ್ತರು (ಆ ಮತ್ತು ಘ)
ಜಂಟಿ ಆಯುಕ್ತರು (ಪಶ್ಚಿಮ)
ಜಂಟಿ ಆಯುಕ್ತರು (ಆಸ್ತಿಗಳು)
ಜಂಟಿ ನಿರ್ದೇಶಕರು (ಪಶುಪಾಲನೆ)
ಜಂಟಿ ನಿರ್ದೇಶಕರು (ಸಾಂಖ್ಯಿಕ)
ಆರೋಗ್ಯಾಧಿಕಾರಿ (ಮಹದೇವಪುರ)
ಆರೋಗ್ಯಾಧಿಕಾರಿ (ಯಲಹಂಕ)
ಆರೋಗ್ಯಾಧಿಕಾರಿ (ದಾಸರಹಳ್ಳಿ)

ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಸಮಿತಿಯ ಸದಸ್ಯರುಗಳಿಗೆ ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿ, ತಮ್ಮ ಪರಿಚಯವನ್ನು ಮಾಡಿಕೊಂಡು ನಂತರ ಸಮಿತಿಯ ಸದಸ್ಯರುಗಳು ಮತ್ತು ಅಧಿಕಾರಿಗಳು ಸಭೆಗೆ ತಮ್ಮ ಪರಿಚಯ ಮಾಡಿಕೊಳ್ಳುವಂತೆ ಕೋರಿದರು. ಅದರಂತೆ, ಹಾಜರಿದ್ದ ಸಮಿತಿಯ ಸದಸ್ಯರುಗಳು ಹಾಗೂ ಎಲ್ಲಾ ಅಧಿಕಾರಿಗಳು ಸಭೆಗೆ ತಮ್ಮ ಪರಿಚಯ ಮಾಡಿಕೊಂಡರು.

ಅಧ್ಯಕ್ಷರು ಮಾತನಾಡಿ ಸ್ಥಾಯಿ ಸಮಿತಿಯು ಸಭೆಯ ತಿಳುವಳಿಕೆ ಪತ್ರವನ್ನು ಎಲ್ಲಾ ವಲಯಗಳ ಜಂಟಿ/ಅಪರ ಆಯುಕ್ತರುಗಳಿಗೆ, ಇಲಾಖಾ ಮುಖ್ಯಸ್ಥರುಗಳಿಗೆ ಜಾರಿ ಮಾಡಿ ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕಳುಹಿಸಲಾಗಿದ್ದು, ಕೆಲವು ಅಧಿಕಾರಿಗಳು ಸಭೆಗೆ ಗೈರು ಹಾಜರಾಗಿ ಸ್ಥಾಯಿ ಸಮಿತಿಯ ಸಭೆಗೆ ಅಗೌರವ ತೋರುವ ಮೂಲಕ ಅಪಮಾನವೆಸಗಿದ್ದಾರೆ. ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ನೋಟೀಸು ಜಾರಿ ಮಾಡುವಂತೆ ಅಪರ ಆಯುಕ್ತರು (ಆಡಳಿತ) ರವರಿಗೆ ತಿಳಿಸಿದರು.

ಮೊದಲಿಗೆ ಮಾನ್ಯ ಅಧ್ಯಕ್ಷರು, ಅಪರ ಆಯುಕ್ತರು (ಆಡಳಿತ) ರವರನ್ನು ಪಾಲಿಕೆಯ ಕಾರ್ಯವ್ಯಾಪ್ತಿ, ಒಟ್ಟು ಮಾನವ ಸಂಪನ್ಮೂಲ, ಮಂಜೂರಾಗಿರುವ ಹುದ್ದೆಗಳು, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಸಿಬ್ಬಂದಿಗಳು, ಎರವಲು ಸೇವೆಯ ಮೇಲೆ ನಿಯೋಜನೆಗೊಂಡಿರುವ ಅಧಿಕಾರಿ, ಸಿಬ್ಬಂದಿಗಳ ಸಮಗ್ರ ಮಾಹಿತಿಯನ್ನು ಸಭೆಗೆ ನೀಡುವಂತೆ ತಿಳಿಸಿದರು.

ಅಪರ ಆಯುಕ್ತರು (ಆಡಳಿತ) ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸವಿಸ್ತಾರ ವಿವರಣೆಯನ್ನು ನೀಡಿ ಪೂಜ್ಯ ಮಹಾಪೌರರು ಪಾಲಿಕೆಯ ಮೇಲುಸ್ತುವಾರಿ, ನಿರ್ದೇಶನ ಮತ್ತು ಕಾರ್ಯರೂಪಕ್ಕೆ ತರುವುದನ್ನು ನಿಯಂತ್ರಿಸುವುದು ಅಥವಾ ಠರಾವುಗಳನ್ನು ಒಪ್ಪಿಕೊಳ್ಳುವ, ಸ್ಥಾಯಿ ಸಮಿತಿಯ ಅಧ್ಯಕ್ಷ ಮತ್ತು ಆಯುಕ್ತರು ಕೊಟ್ಟ ಆಶ್ವಾಸನೆಗಳನ್ನು ಕಾರ್ಯರೂಪಕ್ಕೆ ತರುವ ಅಧಿಕಾರವು ಒಳಪಟ್ಟಿದ್ದು, ಆಯುಕ್ತರವರು ಪಾಲಿಕೆಯ ಮುಖ್ಯ ಆಡಳಿತಾತ್ಮಕ ಕಾರ್ಯನಿರ್ವಾಹಕ ಅಧಿಕಾರಿಗಳಾಗಿರುತ್ತಾರೆಂದು ಸಮರ್ಪಕ ಆಡಳಿತದ ಹಿತದೃಷ್ಟಿಯಿಂದ ಅವರ ಅಧಿಕಾರವನ್ನು ವಿವಿಧ ಅಧಿಕಾರಿಗಳಿಗೆ ಹಸ್ತಾಂತರ ಮಾಡಬಹುದಾಗಿರುತ್ತದೆಂದು ಹಾಗೂ ಈ ಎಲ್ಲಾ ಅಧಿಕಾರಿಗಳ ಮೇಲ್ವಿಚಾರಣೆ ಆಯುಕ್ತರವರ ಅಧೀನದಲ್ಲಿರುತ್ತದೆಂದು ಸಭೆಗೆ ತಿಳಿಸಿದರು.

ನಂತರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ಮುಖ್ಯವಾಗಿ ಪಾಲಿಕೆಯ ಅಧಿಕಾರಿ/ಸಿಬ್ಬಂದಿಗಳ ಮೇಲ್ವಿಚಾರಣೆ ಮಾಡುವ ಅಧಿಕಾರ ಹೊಂದಿರುತ್ತದೆಂದು ಹಾಗೂ ಪಾಲಿಕೆಯ ಮೂಲ ಶಕ್ತಿಕೇಂದ್ರ ಹಣಕಾಸು ಮತ್ತು ಸಿಬ್ಬಂದಿ ಎಂದು ಸಭೆಗೆ ತಿಳಿಸಿದರು. ಬೆಂಗಳೂರು ನಗರವು ಭಾರತದಲ್ಲಿ 5ನೇ ದೊಡ್ಡ ನಗರವು ಹಾಗೂ ಅತೀ ವೇಗವಾಗಿ ಬೆಳೆಯುತ್ತಿರುವ ನಗರವಾಗಿದ್ದು, ಬೆಳೆಯುತ್ತಿರುವ ನಗರದ ಸಾರ್ವಜನಿಕ ಅವಶ್ಯಕತೆಗಳನ್ನು ಪೂರೈಸಲು ನಾವು ಇರುವ ಕಡಿಮೆ ಸಿಬ್ಬಂದಿಯಿಂದಲೇ ಕೆಲಸ ನಿರ್ವಹಿಸುತ್ತಿರುವುದಾಗಿ ತಿಳಿಸಿದರು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವರ್ಗಗಳ ಅಧಿಕಾರಿ/ನೌಕರರ ವಿವರಗಳನ್ನು, ಎರವಲು ಸೇವೆಯ ಆಧಾರದ ಮೇಲೆ, ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ಸಮಗ್ರ ಅಂಕಿ ಅಂಶಗಳ ಮಾಹಿತಿಯನ್ನು ಸಭೆಗೆ ನೀಡಿದರು.

ಮಾನ್ಯ ಆಯುಕ್ತರರು ಕೆ.ಎಂ.ಸಿ ಕಾಯ್ದೆ 1976ರ ಅನ್ವಯ ತಮ್ಮ ಅಧಿಕಾರವನ್ನು ಇತರೆ ಅಧಿಕಾರಿಗಳಿಗೆ ಪ್ರತ್ಯಾಯೋಜನೆ ಮಾಡಿರುವುದಾಗಿ ತಿಳಿಸಿ, ಕೇಂದ್ರ ಕಛೇರಿಯಲ್ಲಿ ಅಪರ ಆಯುಕ್ತರು (ಆಡಳಿತ), ವಿಶೇಷ ಆಯುಕ್ತರು (ಯೋಜನೆ), (ಹಣಕಾಸು), (ಘನತ್ಯಾಜ್ಯ), ಮುಖ್ಯ ಆರೋಗ್ಯಾಧಿಕಾರಿಗಳು, ಮುಖ್ಯ ಲೆಕ್ಕಾಧಿಕಾರಿಗಳು, ವಲಯ ಮಟ್ಟದಲ್ಲಿ ಅಪರ/ಜಂಟಿ ಆಯುಕ್ತರರುಗಳು, ಉಪ ಆಯುಕ್ತರರುಗಳು, ಆರೋಗ್ಯಾಧಿಕಾರಿಗಳು ಹೀಗೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜನೆ ಮಾಡಿರುವುದಾಗಿ ತಿಳಿಸಿದರು.

ವಿಶೇಷ ಅಯುಕ್ತರು (ಯೋಜನೆ) ರವರು ಪ್ರಧಾನ ಅಭಿಯಂತರರ ಕಛೇರಿ, ರಸ್ತೆ ಮತ್ತು ಮೂಲಭೂತ ಸೌಕರ್ಯ ಕಛೇರಿ, ಕಾಮಗಾರಿ ಇಲಾಖೆಗಳ, ಬೃಹತ್ ನೀರುಗಾಲುವೆ ಇಲಾಖೆಗಳ

ಸಂಪೂರ್ಣ ಮೇಲ್ವಿಚಾರಣೆಯನ್ನು ನಿರ್ವಹಿಸುತ್ತಿರುವುದಾಗಿ ಹಾಗೂ ವಿಶೇಷ ಆಯುಕ್ತರು (ಹಣಕಾಸು) ರವರು ಪಾಲಿಕೆಯ ಅನುದಾನದ ಕ್ರೋಢೀಕರಣ ಮತ್ತು ಸಂಪನ್ಮೂಲ ಸಂಗ್ರಹಣೆ ಮೇಲ್ವಿಚಾರಣೆ ನಡೆಸುವುದಾಗಿ ಸಭೆಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು ಕಾನೂನು ಕೋಶದ ಮುಖ್ಯಸ್ಥರೊಂದಿಗೆ ಚರ್ಚಿಸುತ್ತಾ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಅಧಿಕಾರ ಮತ್ತು ಕರ್ತವ್ಯಗಳ ಸಮಗ್ರ ಮಾಹಿತಿಯನ್ನು ಸಭೆಗೆ ನೀಡಲು ತಿಳಿಸಿದರು.

ಕಾನೂನು ಕೋಶದ ಮುಖ್ಯಸ್ಥರು ಕೆ.ಎಂ.ಸಿ. ಕಾಯ್ದೆ 1976ರ ನಿಯಮಾನುಸಾರ ಪೂಜ್ಯ ಮಹಾಪೌರರ, ಉಪ ಮಹಾಪೌರರ, ಆಯುಕ್ತರು ಮತ್ತು ಕಾನೂನು ಕೋಶದ ಮುಖ್ಯಸ್ಥರ 5 ಹುದ್ದೆಗಳು, 12 ಸ್ಥಾಯಿ ಸಮಿತಿಗಳು ಮತ್ತು ಪ್ರತಿ ಸ್ಥಾಯಿ ಸಮಿತಿಗೆ ಒಬ್ಬ ಅಧ್ಯಕ್ಷರನ್ನೊಳಗೊಂಡ 11 ಸದಸ್ಯರ ಹುದ್ದೆಗಳು ಸಂವಿಧಾನಾತ್ಮಕ ಹುದ್ದೆಗಳಾಗಿದ್ದು, ಉಳಿದ ಹುದ್ದೆಗಳು ಸಿ & ಆರ್ ನಿಯಮಾವಳಿಗಳ ಅಡಿಯ ಹುದ್ದೆಗಳಾಗಿರುವುದಾಗಿ ತಿಳಿಸಿದರು. ಆಯುಕ್ತರು ಮುಖ್ಯ ಆಡಳಿತಾತ್ಮಕ ಕಾರ್ಯನಿರ್ವಾಹಕ ಅಧಿಕಾರಿಗಳಾಗಿರುತ್ತಾರೆಂದು ತಿಳಿಸಿದರು. ಸಮಿತಿಗೆ ಆಡಳಿತ ಸುಧಾರಣೆ ಮತ್ತು ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಪಟ್ಟಂತೆ ಪೂರ್ಣ ಪ್ರಮಾಣದ ಅಧಿಕಾರವಿರುವುದಾಗಿ ತಿಳಿಸಿದರು ಹಾಗೂ ಆಡಳಿತ ಸುಧಾರಣೆಗೆ ಸಂಬಂಧಿಸಿದಂತೆ ಅಧ್ಯಯನ ಮಾಡಿ ಸಮಗ್ರ ವರದಿಯನ್ನು ಒಪ್ಪಿಸುವ ಜವಾಬ್ದಾರಿಯು ಸ್ಥಾಯಿ ಸಮಿತಿಗೆ ಇರುವುದಾಗಿ, ಸೇವಾ ನಿಯಮ ಅಗತ್ಯತೆಗೆ ತಕ್ಕಂತೆ ತಿದ್ದುಪಡಿ, ಅಗತ್ಯ ಇರುವ ಹುದ್ದೆಗಳನ್ನು ಸೃಜಿಸಲು ಕ್ರಮ ಹಾಗೂ ಅಗತ್ಯ ಇಲ್ಲದಿರುವ ಹುದ್ದೆಗಳನ್ನು ರದ್ದುಪಡಿಸಲು, ಮಂಜೂರಾತಿಯಾಗಿ ಖಾಲಿ ಇರುವ ಹುದ್ದೆಗಳ ನೇಮಕಾತಿಗೆ ಕ್ರಮ, ಹುದ್ದೆಗಳು ಮತ್ತು ಅದರ ಕ್ರಿಯಾ ಯೋಜನೆ, ನಿಯೋಜನೆ ಮೇಲಿನ ಅಧಿಕಾರಿಗಳ ನಿಯಂತ್ರಣ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ನಿರ್ವಹಿಸುವ ಅಧಿಕಾರ ಸಮಿತಿಗೆ ಇರುವುದಾಗಿ ಸಭೆಗೆ ತಿಳಿಸಿದರು.

ನಂತರ ಅಧ್ಯಕ್ಷರು ಮಾತನಾಡುತ್ತಾ ಪಾಲಿಕೆಯಲ್ಲಿ ಎರವಲು ಸೇವೆಯ ಆಧಾರದ ಮೇಲೆ ಬಂದಿರುವ ಅಧಿಕಾರಿಗಳ/ಸಿಬ್ಬಂದಿಗಳ ಸ್ಥಳಕ್ಕೆ ಪಾಲಿಕೆಯಿಂದಲೇ ನೇರವಾಗಿ ನೇಮಕಾತಿ ಮಾಡಿಕೊಳ್ಳಲು ಸಾಧ್ಯವಿಲ್ಲವೆ ಎಂದು ಪ್ರಶ್ನಿಸಿದಾಗ, ಕಾನೂನು ಸಲಹೆಗಾರರು ಈ ಬಗ್ಗೆ ಪಾಲಿಕೆಗೆ ಅಧಿಕಾರ ಇರುವುದಾಗಿ ತಿಳಿಸಿ, C & R ನಿಯಮಗಳನ್ನು ತಿದ್ದುಪಡಿ ಮಾಡಬೇಕೆಂದು ಸಲಹೆ ನೀಡಿದರು.

ಮುಂದುವರಿದು ಅಧ್ಯಕ್ಷರು ಮಾತನಾಡುತ್ತಾ, ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಐ.ಎ.ಎಸ್ ಮತ್ತು ಕೆ.ಎ.ಎಸ್ ಅಧಿಕಾರಿಗಳ ಮೂಲ ಇಲಾಖೆ ಮತ್ತು ಅವರು ನಿರ್ವಹಿಸುತ್ತಿರುವ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಕೇಳಿದಾಗ, ನಿಯಮ 82 ಮತ್ತು 84ರ ಅನ್ವಯ ಸರ್ಕಾರ ಸದರಿ ಅಧಿಕಾರಿಗಳನ್ನು ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸಲು ನಿಯೋಜಿಸುವುದಾಗಿ ಅಪರ ಆಯುಕ್ತರು (ಆಡಳಿತ) ರವರು ಸಭೆಗೆ ತಿಳಿಸಿದರು. ಪಾಲಿಕೆಯ ವಲಯ ಕಛೇರಿಗಳಲ್ಲಿ Non KAS/IAS ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿರುವುದರಿಂದ, ಅರ್ಹತೆ ಇಲ್ಲದೆ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲವಾದ್ದರಿಂದ, ಪಾಲಿಕೆಯ ಕೆಲಸ ಕಾರ್ಯಗಳು ವಲಯ ಮಟ್ಟದಲ್ಲಿ ಸುಗಮವಾಗಿ ನಡೆಯುತ್ತಿಲ್ಲದೆ ಇರುವುದು ಕಂಡುಬರುತ್ತಿರುತ್ತದೆ. ಈ ರೀತಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿಗಳ ವಿವರಗಳನ್ನು ಸಮಿತಿಗೆ ಒದಗಿಸುವಂತೆ ಅಪರ ಆಯುಕ್ತರು (ಆಡಳಿತ) ರವರಿಗೆ ಸೂಚಿಸಿದರು.

ಅಧ್ಯಕ್ಷರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಾಕಷ್ಟು ಅಧಿಕಾರಿಗಳು/ಸಿಬ್ಬಂದಿಗಳು ಬಯೋ ಮೆಟ್ರಿಕ್ ಯಂತ್ರಗಳಿದ್ದರೂ ಅವುಗಳನ್ನು ಉಪಯೋಗಿಸದೆ ಕಛೇರಿ ವೇಳೆಗೆ ಹಾಜರಾಗದೆ ತಮ್ಮ ಇಷ್ಟಾನುಸಾರ ಕಛೇರಿಗಳಿಗೆ ಹಾಜರಾಗುತ್ತಿರುವುದು, ಗುರುತಿನ ಚೀಟಿ ಧರಿಸದಿರುವುದು, 4ನೇ ದರ್ಜೆ ನೌಕರರು ಸಮವಸ್ತ್ರಗಳಿಗೆ ಹಣ ಸ್ವೀಕಾರ ಮಾಡಿಕೊಂಡು, ಸಮವಸ್ತ್ರಗಳನ್ನು ಧರಿಸದಿರುವುದರ ಬಗ್ಗೆ ತಿಳಿಸುತ್ತಾ, ಈ ಬಗ್ಗೆ ಹಿಂದೆ ಸಾಕಷ್ಟು ಬಾರಿ ತಿಳುವಳಿಕೆ ನೀಡಿದ್ದಾಗ್ಯೂ ನೌಕರ ಸಿಬ್ಬಂದಿಗಳು ಮೇಲಾಧಿಕಾರಿಗಳ ತಿಳುವಳಿಕೆಗಳನ್ನು ಪಾಲಿಸದೆ ಅಶಿಸ್ತಿನಿಂದ ವರ್ತಿಸುತ್ತಿರುವುದು ಗಮನಕ್ಕೆ ಬಂದಿರುವುದಾಗಿ, ಎಲ್ಲಾ ಅಧಿಕಾರಿ ನೌಕರರುಗಳು ಕಡ್ಡಾಯವಾಗಿ ಗುರುತಿನ ಚೀಟಿ ಧರಿಸಲು ಹಾಗೂ 4ನೇ ದರ್ಜೆ ನೌಕರರು ಸಮವಸ್ತ್ರ ಧರಿಸಲು ಸೂಕ್ತ ಎಚ್ಚರಿಕೆ ನೀಡುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದರು ಹಾಗೂ ಇನ್ನು ಮುಂದೆ ಬಯೋಮೆಟ್ರಿಕ್ ಹಾಜರಾತಿಯನ್ನು ಪರಿಶೀಲಿಸಿ ವೇತನ ಪಾವತಿಸುವಂತೆ ನಿರ್ದೇಶಿಸಿದರು.

ಅಧ್ಯಕ್ಷರು ಮಾತನಾಡುತ್ತ ಅಧಿಕಾರಿ/ನೌಕರರು/ಸಿಬ್ಬಂದಿಗಳು ನಿಗಧಿತ ವೇಳೆಗೆ ಕಛೇರಿಗೆ ಹಾಜರಾಗದೇ ಇರುವ ಬಗ್ಗೆ, ಹಾಜರಾತಿ ಪುಸ್ತಕಗಳ ಪರಿಶೀಲನೆಯ ಬಗ್ಗೆ, ಚಲನವಲನ ಪುಸ್ತಕಗಳನ್ನು ನಿರ್ವಹಣೆ ಮಾಡಲಾಗುತ್ತಿದೆಯೇ ಎಂಬುದರ ಬಗ್ಗೆ ವಿವರಣೆ ಕೋರಿದರು. ಕಂದಾಯ ಇಲಾಖೆಗಳಲ್ಲಿ ಗಣಕ ಯಂತ್ರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲವೆಂದು, ಇದರಿಂದ ಕಛೇರಿ ಮತ್ತು ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟಾಗುತ್ತಿರುವುದಾಗಿ ಅಸಮಾಧಾನ ವ್ಯಕ್ತಪಡಿಸಿ, ಪಾಲಿಕೆಯಲ್ಲಿ ಇರುವ ಒಟ್ಟು ಗಣಕಯಂತ್ರಗಳು ಮತ್ತು ಅವುಗಳಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಗಣಕ ಯಂತ್ರಗಳು,

ಕಳೆದ 5 ರಿಂದ 10 ವರ್ಷಗಳಿಂದ ಪಾಲಿಕೆಯಲ್ಲಿ ಇರುವ  ಗಣಕಯಂತ್ರಗಳ ವಿವರಗಳನ್ನು ಸಭೆಗೆ ಸಲ್ಲಿಸಲು ಹಾಗೂ ಇತರೆ ಇಲಾಖೆಗಳಿಗೆ ಹೋಲಿಸಿದರೆ ಪಾಲಿಕೆಯಲ್ಲಿ ಎಲ್ಲಾ ವಿವರಗಳನ್ನು ಗಣಕೀಕೃತಗೊಳಿಸಿರುವುದಿಲ್ಲವೆಂದು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಅಧ್ಯಕ್ಷರು ಸೂಚಿಸಿದರು.

ಅಧ್ಯಕ್ಷರು ಮಾತನಾಡುತ್ತಾ ಪಾಲಿಕೆಯ ಆಡಳಿತ ವ್ಯವಸ್ಥೆಯಲ್ಲಿ ದಕ್ಷತೆಯನ್ನು ಹೆಚ್ಚಿಸಲು ಸುಮಾರು 5, 10 ಮತ್ತು 20 ವರ್ಷಗಳಿಂದ ಒಂದೇ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳನ್ನು ನಿಯಮಾನುಸಾರ ವರ್ಗಾವಣೆ ಮಾಡುವಲ್ಲಿ ಯಾವ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ ಈ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಲು ಅಪರ ಆಯುಕ್ತರು (ಆಡಳಿತ) ರವರನ್ನು ಕೇಳಿದಾಗ, ಅಪರ ಆಯುಕ್ತರರು ಈಗಾಗಲೇ ಸಾಮಾನ್ಯ ವರ್ಗಾವಣೆ ನಿಯಮದಡಿಯಲ್ಲಿ ಹಲವು ಅಧಿಕಾರಿ/ನೌಕರರನ್ನು ವರ್ಗಾವಣೆ ಮಾಡಿದ್ದು, ಈ ಮಧ್ಯೆ ಪಾಲಿಕೆಯ ಚುನಾವಣೆ ಬಂದಿದ್ದರಿಂದ ವರ್ಗಾವಣೆ ಪ್ರಕ್ರಿಯೆಯು ಪೂರ್ಣವಾಗಿರುವುದಿಲ್ಲವೆಂದು ಸಭೆಗೆ ಮಾಹಿತಿ ನೀಡಿದರು.

ಹಾಲಿ ವರ್ಗಾವಣೆ ಪ್ರಕ್ರಿಯೆಯನ್ನು ಮುಂದುವರಿಸಲು ಅಧ್ಯಕ್ಷರು ತಿಳಿಸಿದಾಗ, ಈ ಹಿಂದಿನ ಆಯುಕ್ತರರು ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಮೇ ಮತ್ತು ಜೂನ್ ತಿಂಗಳುಗಳಲ್ಲಿ ಮಾತ್ರ ವರ್ಗಾವಣೆಯನ್ನು ಮಾಡುವುದಾಗಿ ಅಫೀಡವಿಟ್ ಸಲ್ಲಿಸಿದ್ದು, ಈ ಹಿನ್ನೆಲೆಯಲ್ಲಿ ವರ್ಗಾವಣೆಯನ್ನು ಮೇ ಮತ್ತು ಜೂನ್ ತಿಂಗಳುಗಳಲ್ಲಿಯೇ ಮಾಡಬೇಕಾಗಿರುವುದಾಗಿ ತಿಳಿಸಿದರು. ಆದರೆ, ನೌಕರರ ವಿರುದ್ದ ದೂರುಗಳು ಬಂದಾಗ, ಬಡ್ತಿ, ಮರಣ ಇತ್ಯಾದಿ ಸಂದರ್ಭಗಳಲ್ಲಿ ವರ್ಗಾವಣೆ ಮಾಡುವುದಾಗಿ ಅಪರ ಆಯುಕ್ತರು (ಆಡಳಿತ) ರವರು ಸಭೆಗೆ ಮಾಹಿತಿ ನೀಡಿದರು.

ಅಧ್ಯಕ್ಷರು ಎರವಲು ಸೇವೆಯ ಆಧಾರದ ಮೇಲೆ ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳ ಬಗ್ಗೆ ಮಾತನಾಡುತ್ತಾ, 3 ವರ್ಷಗಳಿಗೆ ಮೇಲ್ಪಟ್ಟು ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎರವಲು ಸೇವೆಯ ಅಧಿಕಾರಿಗಳನ್ನು ಅವರವರ ಮಾತೃ ಇಲಾಖೆಗೆ ಹಿಂದಿರುಗಿಸಬೇಕೆಂದು ಮತ್ತು ಈ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಮಿತಿಗೆ ಸಲ್ಲಿಸಲು ತಿಳಿಸಿದಾಗ, ಅಪರ ಆಯುಕ್ತರು (ಆಡಳಿತ) ರವರು ಎರವಲು ಸೇವೆಯ ಮೇಲೆ  ಬರುವ ಅಧಿಕಾರಿ/ನೌಕರರನ್ನು ನಿಯೋಜಿಸುವ ಅಧಿಕಾರ ವ್ಯಾಪ್ತಿಯು ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ಒಳಪಡುವುದಾಗಿ ತಿಳಿಸುತ್ತಾ, ಅವಧಿ ಮುಗಿದಿರುವ ಅಧಿಕಾರಿ/ನೌಕರರುಗಳನ್ನು ಅವರವರ ಮಾತೃ ಇಲಾಖೆಗೆ ಹಿಂದಿರುಗಿಸಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಗೆ ಮಾಹಿತಿ ನೀಡಿದರು.

ಅಧ್ಯಕ್ಷರು ಮಾತನಾಡುತ್ತಾ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡಲು ಈ ಹಿಂದೆ ಅರ್ಜಿಗಳನ್ನು ಅಹ್ವಾನಿಸಿದ್ದು, ಸದರಿ ವಿಷಯವು ಯಾವ ಹಂತದಲ್ಲಿದೆ ಎಂದು ಮಾಹಿತಿ ಕೇಳಿದಾಗ, ಅಪರ ಆಯುಕ್ತರು (ಆಡಳಿತ) ರವರು 4500 ಪೌರಕಾರ್ಮಿಕರುಗಳ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಈಗಾಗಲೇ ಅರ್ಜಿಗಳನ್ನು scrutiny ಮಾಡಲಾಗಿದ್ದು, ಇನ್ನು 15 ದಿನಗಳಲ್ಲಿ ಆಯ್ಕೆ ಪಟ್ಟಿ ಮತ್ತು waiting list ಅನ್ನು ಪ್ರಚುರಪಡಿಸುವುದಾಗಿ ಸಭೆಗೆ ಮಾಹಿತಿ ನೀಡಿದರು.

ಸಮಿತಿಯ ಸದಸ್ಯರಾದ ಶ್ರೀಮತಿ ಜೆ.ಎಂ.ಸವಿತಾ ಮಾಯಣ್ಣಗೌಡ ರವರು C & R ನಿಯಮಗಳ ತಿದ್ದುಪಡಿ ಬಗ್ಗೆ ಮಾತನಾಡುತ್ತಾ, ಈ ಬಗ್ಗೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ಅಧ್ಯಕ್ಷರು ಅಪರ ಆಯುಕ್ತರು (ಆಡಳಿತ) ರವರನ್ನು ಕೇಳಿದಾಗ, ಈ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಕಳುಹಿಸಿರುವುದಾಗಿ ತಿಳಿಸಿದರು. ಆಗ ಅಧ್ಯಕ್ಷರು ಸದರಿ ಕಡತಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿಯನ್ನು ಸಮಿತಿಗೆ ಕಳುಹಿಸಿದ್ದಲ್ಲಿ ಸರ್ಕಾರದ ಹಂತದಲ್ಲಿ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸುವುದಾಗಿ ತಿಳಿಸಿದರು. ಪಾಲಿಕೆ ಆಡಳಿತದಲ್ಲಿನ ದಕ್ಷತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮತ್ತು ಪಾಲಿಕೆಗೆ ಅನುಕೂಲವಾಗುವಂತಹ ಆದೇಶಗಳನ್ನು ಸರ್ಕಾರದಿಂದ ಪಡೆಯುವಲ್ಲಿ ಸಮಿತಿಯು ಎಲ್ಲಾ ನಿಟ್ಟಿನಲ್ಲಿ ಪ್ರಯತ್ನಿಸುವುದಾಗಿ ಅಧ್ಯಕ್ಷರು ಸಭೆಗೆ ತಿಳಿಸಿದರು.

ಮುಂದುವರಿದಂತೆ, ಪಾಲಿಕೆಯ ಆದಾಯದ ಬಗ್ಗೆ ಚರ್ಚಿಸುತ್ತಾ, ಪಾಲಿಕೆಯ ಒಟ್ಟು ವಾರ್ಷಿಕ ಆದಾಯದಲ್ಲಿ ಅರ್ಧದಷ್ಟು ಮೊತ್ತವು ಆಡಳಿತ ವೆಚ್ಚಕ್ಕೆ ಹೋಗುತ್ತಿರುವುದಾಗಿ ಅಪರ ಆಯುಕ್ತರು (ಆಡಳಿತ) ರವರು ಸಭೆಗೆ ತಿಳಿಸಿದಾಗ, ಆಸ್ತಿಗಳ ನೊಂದಣಿ ಶುಲ್ಕದ (stamp duty) ಆದಾಯವನ್ನು ಪಾಲಿಕೆ ವ್ಯಾಪ್ತಿಗೆ ಒಳಪಡಿಸಿದರೆ ಹಾಗೂ ಆಸ್ತಿ ತೆರಿಗೆಯನ್ನು ಪರಿಷ್ಕರಣೆ ಮಾಡಿದರೆ ಪಾಲಿಕೆಯ ಆರ್ಥಿಕ ಮಟ್ಟ ಸುಧಾರಿಸುವುದಾಗಿ, ಈ ವಿಷಯವನ್ನು ಕೌನ್ಸಿಲ್‌ನಲ್ಲಿ ಪ್ರಸ್ತಾಪಿಸುವುದಾಗಿ ತಿಳಿಸಿದರು.

ಅಧ್ಯಕ್ಷರು ಪಾಲಿಕೆಯ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮಾತನಾಡುತ್ತಾ, ಅಪರ ಆಯುಕ್ತರು (ಕಲ್ಯಾಣ) ರವರಿಗೆ ಪಾಲಿಕೆಯ ಕಲ್ಯಾಣ ಯೋಜನೆ ಕಾರ್ಯಕ್ರಮಗಳ ಸಮಗ್ರ ಮಾಹಿತಿಯನ್ನು ಸಭೆಗೆ ನೀಡಲು ಸೂಚಿಸಿದಾಗ, ಕಲ್ಯಾಣ ಕಾರ್ಯಕ್ರಮಗಳಿಗೆ ರೂ.390.00 ಕೋಟಿ ಮೊತ್ತವನ್ನು ನಿಗಧಿಪಡಿಸಿದ್ದು, ಪಾಲಿಕೆಯಲ್ಲಿನ ಎಲ್ಲಾ ವಲಯಗಳ ಕಲ್ಯಾಣ ಕಾರ್ಯಕ್ರಮಗಳ ಸಂಪೂರ್ಣ ಕ್ರಿಯಾ ಯೋಜನೆಯನ್ನು ಆಯುಕ್ತರವರಿಗೆ ಪಟ್ಟಿ ಮಾಡಿ ಸಲ್ಲಿಸಿರುವುದಾಗಿ ತಿಳಿಸಿದರು.

ನಂತರ ಅಧ್ಯಕ್ಷರು ಮಾತನಾಡುತ್ತಾ ಹೊಸ ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ಎಷ್ಟು ಮೊತ್ತವನ್ನು ವ್ಯಯ ಮಾಡಲಾಗಿದೆ ಮತ್ತು ಒಂಟಿ ಮನೆಗಳ ನಿರ್ಮಾಣ ಕಾರ್ಯಕ್ಕೆ ಖರ್ಚು ಮಾಡಿರುವ ಹಣದ ವಿವರಗಳನ್ನು ಸಮಿತಿಗೆ ಸಲ್ಲಿಸಲು ತಿಳಿಸಿದರು. ಮುಂದುವರಿದು ಕಲ್ಯಾಣ ಕಾರ್ಯಕ್ರಮಗಳು ಹೆಚ್ಚಾಗಿ ಆಗಬೇಕೆಂದು, ಯಾವುದೇ ಫಲಾನುಭವಿಯು ಈ ಕಾರ್ಯಕ್ರಮದಿಂದ ವಂಚಿತನಾಗಬಾರದೆಂದು ಮತ್ತು ಏಜೆಂಟರುಗಳ ಮುಖಾಂತರ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನವನ್ನು ಮಾಡುತ್ತಿದ್ದು, ಇನ್ನು ಮುಂದೆ ಈ ರೀತಿ ಆಗದಂತೆ ಸೂಕ್ತ ಕ್ರಮ ವಹಿಸಲು ತಿಳಿಸಿದರು. ಎಲ್ಲಾ ವಲಯಗಳಲ್ಲಿಯೂ ಕಲ್ಯಾಣ ಕಾರ್ಯಕ್ರಮಗಳ ಒಂದೇ ರೀತಿಯಲ್ಲಿ ಅನುಷ್ಠಾನಗೊಳ್ಳಬೇಕೆಂದು ಹಾಗೂ ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ಬರುವ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೆ ತರುವ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿಗಳು ಶ್ರಮಿಸಬೇಕೆಂದು ತಿಳಿಸಿದರು. ಕಲ್ಯಾಣ ಇಲಾಖೆಯ ಸಮಗ್ರ ಮಾಹಿತಿಯನ್ನು ಸಮಿತಿಗೆ ಸಲ್ಲಿಸಲು ಅಪರ ಆಯುಕ್ತರು (ಕಲ್ಯಾಣ) ರವರಿಗೆ ತಿಳಿಸಲಾಯಿತು.

ಕಾಮಗಾರಿ ಇಲಾಖೆಗೆ ಸಂಬಂಧಪಟ್ಟಂತೆ ಚರ್ಚಿಸುತ್ತಾ, ಅಧ್ಯಕ್ಷರು ಪ್ರಧಾನ ಅಭಿಯಂತರವರಿಗೆ ಕಾಮಗಾರಿ ಇಲಾಖೆಯ ಸಮಗ್ರ ಮಾಹಿತಿಯನ್ನು ಸಭೆಗೆ ನೀಡಲು ಸೂಚಿಸಿದಾಗ, ಪ್ರಧಾನ ಅಭಿಯಂತರರು ಕಾಮಗಾರಿ ಇಲಾಖೆಯಲ್ಲಿ ಪಾಲಿಕೆಯ 8 ವಲಯಗಳಲ್ಲಿ ಪ್ರತಿ ವಲಯಕ್ಕೆ ಒಬ್ಬರು ಮುಖ್ಯ ಅಭಿಯಂತರರು, ಒಬ್ಬರು ಅಧೀಕ್ಷಕ ಅಭಿಯಂತರರು, ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರುಗಳು, ಕೇಂದ್ರ ಕಛೇರಿಯಲ್ಲಿ ಮುಖ್ಯ ಅಭಿಯಂತರರು ಯೋಜನೆ, ರಸ್ತೆ ಮತ್ತು ಮೂಲಭೂತ ಸೌಕರ್ಯ, ಘನತ್ಯಾಜ್ಯ ನಿರ್ವಹಣೆ, ಬೃಹತ್ ನೀರುಗಾಲುವೆ ಹೀಗೆ ಅಧಿಕಾರವನ್ನು ವಿಂಗಡಿಸಿರುವುದಾಗಿ ತಿಳಿಸಿ, ಮುಖ್ಯ ಅಭಿಯಂತರರ ಅಧೀನದಲ್ಲಿ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು ಕರ್ತವ್ಯ ನಿರ್ವಹಿಸುತ್ತಿರುವುದಾಗಿ ತಿಳಿಸಿದರು.

ರಸ್ತೆ ಇತಿಹಾಸದ ಬಗ್ಗೆ ಮಾತನಾಡುತ್ತಾ, ರಸ್ತೆ ಇತಿಹಾಸದ ಸಮಗ್ರ ಮಾಹಿತಿಯನ್ನು ಸಭೆಗೆ ನೀಡಲು ಅಧ್ಯಕ್ಷರು ಸೂಚಿಸಿದಾಗ, ಪ್ರಧಾನ ಅಭಿಯಂತರರು ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು ಹದಿನಾಲ್ಕು ಸಾವಿರ ಕಿಲೋಮೀಟರ್ ರಸ್ತೆಗಳು ಇದ್ದು, ಸುಮಾರು 1500 ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳು ಇದ್ದು, ರಸ್ತೆ ಇತಿಹಾಸವನ್ನು ದಾಖಲಿಸುವ ಕಾರ್ಯವು ನಡೆಯುತ್ತಿದ್ದು, ಈಗಾಗಲೇ ಶೇಕಡ 70% ಕಾರ್ಯವು ಮುಗಿದಿರುವುದಾಗಿ ಹಾಗೂ ರಸ್ತೆ ಇತಿಹಾಸದಲ್ಲಿ ರಸ್ತೆಯ ಉದ್ದ ಅಗಲ, ಚರಂಡಿಗಳ ಮಾಹಿತಿ,

ವಿವಿಧ ರೀತಿಯ ರಸ್ತೆಗಳು, ಪಾದಾಚಾರಿ ರಸ್ತೆಗಳು, L Shape ಚರಂಡಿ ಈ ಎಲ್ಲಾ ವಿವರಗಳನ್ನು ರಸ್ತೆ ಇತಿಹಾಸದಲ್ಲಿ ದಾಖಲಿಸುವುದಾಗಿ ತಿಳಿಸಿದರು.

ಪಾಲಿಕೆಯ ವಿವಿಧ ವಲಯಗಳ ತಪಾಸಣಾ ಸಂದರ್ಭದಲ್ಲಿ ಕೆಲವು ಅಧಿಕಾರಿಗಳನ್ನು ಅಮಾನತ್ತು ಮಾಡಲಾಗಿದ್ದು, ಈ ರೀತಿ ಅಮಾನತ್ತುಗೊಂಡ ಹಲವು ಅಧಿಕಾರಿಗಳು, ಅಮಾನತ್ತು ಆದೇಶವನ್ನು ರದ್ದುಪಡಿಸಿಕೊಂಡು, ಸದರಿ ಸ್ಥಳಗಳಲ್ಲಿಯೇ ಕಾರ್ಯನಿರ್ವಹಿಸುತ್ತಿರುವುದು ತಿಳಿದುಬಂದಿದ್ದು, ನಿಯಮಾನುಸಾರ ಇಂತಹ ಅಧಿಕಾರಿಗಳ ವಿರುದ್ದ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಅಧ್ಯಕ್ಷರು ತಿಳಿಸಿದರು. ಕೆಲವು ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದ್ದರೂ, ಅವರುಗಳ ಕಾಮಗಾರಿಯನ್ನು ನಿರ್ವಹಿಸುತ್ತಿರುವುದು ಕಂಡುಬಂದಿರುತ್ತದೆಂದು, ಕಪ್ಪು ಪಟ್ಟಿಯಲ್ಲಿರುವ ಗುತ್ತಿಗೆದಾರರ ವಿವರಗಳನ್ನು ಸಮಿತಿಗೆ ಕಳುಹಿಸಲು ಪ್ರಧಾನ ಅಭಿಯಂತರವರಿಗೆ ಸೂಚಿಸಿದರು.

ವಾರ್ಡ್‌ಗಳಲ್ಲಿ ಮಂಜೂರಾತಿ ನಕ್ಷೆಗೆ ವಿರುದ್ದವಾಗಿ ನಿರ್ಮಾಣ ಮಾಡುವ ಕಟ್ಟಡಗಳ ವಿರುದ್ದ ಕ್ರಮ ಕೈಗೊಳ್ಳುವ ಬಗ್ಗೆ ಹಾಗೂ ಇಂತಹ ಕಟ್ಟಡಗಳ ವಿರುದ್ದ ಯಾವ ರೀತಿ ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಮಾಹಿತಿಗಳನ್ನು ಕೇಳಿದಾಗ, ಪ್ರಧಾನ ಅಭಿಯಂತರರು ಸಂಬಂಧಪಟ್ಟ ವಾರ್ಡ್‌ಗಳ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಿಗೆ ಪಿ.ಓ ಮತ್ತು ಸಿ.ಓ ನೋಟೀಸ್‌ಗಳನ್ನು ನೀಡುವ ಅಧಿಕಾರ ಇದ್ದು, ಸದರಿ ಅಭಿಯಂತರರುಗಳೇ ಕೆ.ಎಂ.ಸಿ.ಕಾಯ್ದೆ 1976ರ ಅನ್ವಯ ಈ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂಬ ಮಾಹಿತಿಯನ್ನು ಸಭೆಗೆ ತಿಳಿಸಿದರು. ಆಗ ಅಧ್ಯಕ್ಷರು ಎಲ್ಲಾ ವಲಯಗಳಿಂದ ಸದರಿ ವಿಷಯಕ್ಕೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನು ಹಾಗೂ ಕಟ್ಟಡಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಇರುವ ಪ್ರಕರಣಗಳ ವಿವರಗಳನ್ನು ಕ್ರೋಢೀಕರಿಸಿಕೊಂಡು ಸಮಿತಿಗೆ ಸಲ್ಲಿಸಲು ಪ್ರಧಾನ ಅಭಿಯಂತರರಿಗೆ ಸೂಚಿಸಿದರು.

ಮುಂದುವರಿದು ಕಾನೂನು ಕೋಶದ ಮುಖ್ಯಸ್ಥರನ್ನು ಅವರ ಕಛೇರಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಸಭೆಗೆ ಸಲ್ಲಿಸಲು ತಿಳಿಸಿದಾಗ, ಕಾನೂನು ಸಲಹೆಗಾರರು ಕೆ.ಎಂ.ಸಿ.ಕಾಯ್ದೆ 484ರ ಪ್ರಕಾರ ಕಾನೂನು ಕೋಶ ಇರುವುದಾಗಿ ತಿಳಿಸುತ್ತಾ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಕಾನೂನು ಕೋಶದ ಮುಖ್ಯಸ್ಥರಾಗಿರುತ್ತಾರೆಂದು, ಸದ್ಯ ಕಾನೂನು ವಿಭಾಗದಲ್ಲಿ ಒಟ್ಟು 49 ಜನ ವಕೀಲರು ಇದ್ದು, ಅದರಲ್ಲಿ 30 ವಕೀಲರಿಗೆ ಮಾತ್ರ ಕೆಲಸವನ್ನು ಹಂಚಿಕೆ ಮಾಡಿರುವುದಾಗಿ ತಿಳಿಸಿದರು. ಕೆಲವು ವಕೀಲರು ಪಾಲಿಕೆಯ ಕರ್ತವ್ಯದಲ್ಲಿನ ಗೌಪ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ವಿಫಲರಾಗಿರುವುದರಿಂದ ಅವರುಗಳಿಗೆ ಯಾವುದೇ ಕೆಲಸವನ್ನು ನೀಡಿರುವುದಿಲ್ಲವೆಂದು ಮತ್ತು ಈ ಹಿಂದೆ ಇಂತಹ ಕೆಲವು ವಕೀಲರನ್ನು ಕರ್ತವ್ಯದಿಂದ ತೆಗೆದುಹಾಕಿರುವುದಾಗಿ ತಿಳಿಸಿದರು. ಕಾನೂನು ಕೋಶ ವಿಭಾಗದಲ್ಲಿ ಒಟ್ಟು 7085 ದಾವೆಗಳು

ಇತ್ಯರ್ಥಗೊಳ್ಳಲು ಬಾಕಿ ಇರುವುದಾಗಿ ಕಾನೂನು ಕೋಶ ಮುಖ್ಯಸ್ಥರು ತಿಳಿಸಿದಾಗ, ಅಧ್ಯಕ್ಷರು ಬಾಕಿ ಇರುವ ಪ್ರಕರಣಗಳ ಸಂಪೂರ್ಣ ಮಾಹಿತಿಯನ್ನು ಹಾಗೂ ಪಾಲಿಕೆಯ ಪರವಾಗಿ ಮತ್ತು ವಿರುದ್ದವಾಗಿ ಆದೇಶವಾಗಿರುವ ನ್ಯಾಯಾಲಯದ ಆದೇಶದ ಪ್ರತಿಗಳನ್ನು ಸಮಿತಿಗೆ ಸಲ್ಲಿಸಲು ಸೂಚಿಸಿದರು.

ಮುಂದುವರಿದು ಕಾನೂನು ಕೋಶ ಮುಖ್ಯಸ್ಥರು ನ್ಯಾಯಾಲಯಗಳ ಪ್ರಕರಣಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಅವರವರ ಕಛೇರಿಗಳಿಗೆ ಸಂಬಂಧಿಸಿದಂತೆ ಇರುವ ಪ್ರಕರಣಗಳ ಕಂಡಿಕೆವಾರು ಉತ್ತರವನ್ನು ಸಲ್ಲಿಸಲು ವಿಳಂಭ ಮಾಡುತ್ತಿರುವುದರಿಂದಲೂ ಹಾಗೂ ಎಲ್.ಸಿ.ಆರ್ ಗಳನ್ನು ಸಕಾಲದಲ್ಲಿ ಕಳುಹಿಸುತ್ತಿಲ್ಲವಾದ್ದರಿಂದ ಪ್ರಕರಣಗಳನ್ನು ನ್ಯಾಯಾಲಯದಲ್ಲಿ ಶೀಘ್ರವಾಗಿ ಇತ್ಯರ್ಥಗೊಳಿಸಲು ಸಾಧ್ಯವಾಗುತ್ತಿರುವುದಿಲ್ಲವೆಂದು ತಿಳಿಸಿದಾಗ, ಅಂತಹ ಅಧಿಕಾರಿಗಳ ಮಾಹಿತಿಯನ್ನು ಸಲ್ಲಿಸಿದ್ದಲ್ಲಿ ಅಗತ್ಯ ಕ್ರಮಕೈಗೊಳ್ಳುವುದಾಗಿ ಅಧ್ಯಕ್ಷರು ತಿಳಿಸಿದರು. ಇನ್ನು ಕಾನೂನು ಕೋಶದ ವಿಭಾಗದಲ್ಲಿ ಅಧಿಕಾರಿ/ಸಿಬ್ಬಂದಿಗಳ ಕೊರತೆ ಇದ್ದು, ಕಾನೂನು ಶಾಖೆಗೆ ಪ್ರತ್ಯೇಕ ರೆಕಾರ್ಡ್ ರೂಮ್ ಇರುವುದಿಲ್ಲವಾದ್ದರಿಂದ ಕಛೇರಿ ಕೆಲಸ ಕಾರ್ಯಗಳು ಕುಂಠಿತಗೊಳ್ಳುತ್ತಿರುವುದಾಗಿಯು ತಿಳಿಸಿದಾಗ, ಈ ಬಗ್ಗೆ ಸಮಗ್ರ ಮಾಹಿತಿಯನ್ನು ಸಮಿತಿಗೆ ಸಲ್ಲಿಸಿದ್ದಲ್ಲಿ, ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಆಯುಕ್ತರವರಿಗೆ ಸೂಚಿಸುವುದಾಗಿ ತಿಳಿಸಿದರು. ಒಟ್ಟಾರೆ ಕಾನೂನು ಕೋಶ ವಿಭಾಗದಲ್ಲಿ ಯಾವುದೇ ಕಡತಗಳನ್ನು ವಿಲೇ ಇಟ್ಟುಕೊಳ್ಳದೇ ನಿಯಮನುಸಾರ ಕಡತಗಳನ್ನು ವಿಲೇವಾರಿ ಮಾಡುತ್ತಿರುವುದಾಗಿ ತಿಳಿಸಿದರು.

ಕಾನೂನು ಕೋಶ ಮುಖ್ಯಸ್ಥರು ಅಡಳಿತ ಶಾಖೆಯಲ್ಲಿ ಮುಖ್ಯವಾಗಿ ಕೆಲವೊಂದು ವಿಷಯಗಳಲ್ಲಿ ಗೌಪ್ಯತೆಯನ್ನು ಕಾಪಾಡಿಕೊಳ್ಳಬೇಕಾಗಿದ್ದರು, ಗೌಪ್ಯತೆಯನ್ನು ಕಾಪಾಡುತ್ತಿರುವುದಿಲ್ಲವೆಂದು ಹಾಗೂ ಆಯುಕ್ತರ ಕಛೇರಿಯಿಂದ ನಿಗಧಿತ ಸಮಯಕ್ಕೆ ಮಾಹಿತಿ ಮತ್ತು ಕಂಡಿಕೆವಾರು ಉತ್ತರಗಳನ್ನು ನೀಡುತ್ತಿರುವುದಿಲ್ಲವೆಂದು ತಿಳಿಸಿದರು. ಆಯುಕ್ತರ ಕಛೇರಿಯ ಸಿಬ್ಬಂದಿಗಳ ನಿರ್ಲಕ್ಷ್ಯತೆಯಿಂದ ಕೆಲವೊಂದು ನ್ಯಾಯಾಲಯ ನಿಂದನೆ ಪ್ರಕರಣಗಳನ್ನು ಎದುರಿಸಬೇಕಾಗಿದ್ದು, ಆಯುಕ್ತರೇ ನ್ಯಾಯಾಲಯದ ಮುಂದೆ ಹಾಜರಾಗಬೇಕಾದ ಪ್ರಸಂಗಗಳು ಉದ್ಭವವಾಗುತ್ತಿರುತ್ತದೆ ಎಂದು ತಿಳಿಸಿದರು. ಕಂಡಿಕೆವಾರು ಉತ್ತರಗಳನ್ನು ನಿಗಧಿತ ಅವಧಿಯಲ್ಲಿ ಒದಗಿಸುವ ಸಲುವಾಗಿ ಹಾಗೂ ಪ್ರಕರಣಗಳ ವಿಷಯವಾಗಿ ಕಾನೂನು ಶಾಖೆಗೆ ಉತ್ತಮ ರೀತಿಯಲ್ಲಿ ಸಹಕರಿಸುವಂತೆ ಪಾಲಿಕೆಯ ಎಲ್ಲಾ ಬಟವಾಡೆ ಅಧಿಕಾರಿಗಳಿಗೂ ಸೂಚಿಸಲು ಅಪರ ಆಯುಕ್ತರು (ಆಡಳಿತ) ರವರಿಗೆ ಅಧ್ಯಕ್ಷರು ತಿಳಿಸಿದರು.

ಜಂಟಿ ಆಯುಕ್ತರು (ದಾಸರಹಳ್ಳಿ) ರವರು ಮಾತನಾಡುತ್ತಾ, ದಾಸರಹಳ್ಳಿ ವ್ಯಾಪ್ತಿಯಲ್ಲಿ 08 ವಾರ್ಡ್‌ಗಳಿದ್ದು, ವಲಯದಲ್ಲಿ ಘನತ್ಯಾಜ್ಯ ವಿಲೇವಾರಿ, ಕಾಮಗಾರಿಗಳ ನಿರ್ವಹಣೆ ಮತ್ತು ತೆರಿಗೆ

ವಸೂಲಾತಿಯನ್ನು ನಿಯಮಾನುಸಾರ ಮಾಡುತ್ತಿರುವುದಾಗಿ ತಿಳಿಸಿ, ರೂ.100.00 ಕೋಟಿಗಳ ಆಸ್ತಿ ತೆರಿಗೆಯನ್ನು ನಿಗಧಿಪಡಿಸಿದ್ದು, ಇದುವರೆಗೆ ಸುಮಾರು ರೂ.46.00 ಕೋಟಿಗಳ ಮೊತ್ತವನ್ನು ವಸೂಲಾತಿ ಮಾಡಿರುವುದಾಗಿ ತಿಳಿಸಿದರು. ನಂತರ ಅಧ್ಯಕ್ಷರು ವಲಯಕ್ಕೆ ಸಂಬಂಧಿಸಿದಂತೆ ಏನಾದರೂ ಸಮಸ್ಯೆಗಳು ಇದೆಯೇ ಎಂದು ಕೇಳಿದಾಗ, ಜಂಟಿ ಆಯುಕ್ತರು (ದಾಸರಹಳ್ಳಿ) ರವರ ವಲಯ ವ್ಯಾಪ್ತಿಯಲ್ಲಿ ಯಾವುದೇ ಸಮಸ್ಯೆಗಳು ಇರುವುದಿಲ್ಲವೆಂದು ಮತ್ತು ಸಿಬ್ಬಂದಿಗಳ ಕೊರತೆ ಇರುವುದಿಲ್ಲವೆಂದು ತಿಳಿಸಿದರು.

ಜಂಟಿ ಆಯುಕ್ತರು (ದಕ್ಷಿಣ) ರವರು ಮಾತನಾಡುತ್ತಾ, ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಒಟ್ಟು 44 ವಾರ್ಡ್‌ಗಳು ಇದ್ದು, ವಲಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿ, ಕಾಮಗಾರಿಗಳ ನಿರ್ವಹಣೆ ಮತ್ತು ತೆರಿಗೆ ವಸೂಲಾತಿಯನ್ನು ನಿಯಮಾನುಸಾರ ಮಾಡುತ್ತಿರುವುದಾಗಿ ತಿಳಿಸಿ, ರೂ.490 ಕೋಟಿಗಳ ಆಸ್ತಿ ತೆರಿಗೆಯನ್ನು ನಿಗಧಿಪಡಿಸಿದ್ದು ಇದುವರೆಗೆ ಸುಮಾರು ರೂ.271.00 ಕೋಟಿಗಳ ಮೊತ್ತವನ್ನು ವಸೂಲಾತಿ ಮಾಡಿರುವುದಾಗಿ ತಿಳಿಸಿದರು. ದಕ್ಷಿಣ ವಲಯದಲ್ಲಿ ತೋಟಗಾರಿಕಾ ಅಧೀಕ್ಷಕರ ಹುದ್ದೆಯು ಖಾಲಿ ಇದ್ದು, ಕೂಡಲೇ ಒಬ್ಬರು ತೋಟಗಾರಿಕಾ ಅಧೀಕ್ಷಕರವನ್ನು ನೇಮಿಸಿಕೊಡಬೇಕೆಂದು ಕೋರಿದರು. ವಲಯ ವ್ಯಾಪ್ತಿಯಲ್ಲಿ ಅಗತ್ಯ ಅಧಿಕಾರಿ/ಸಿಬ್ಬಂದಿಗಳ ಕೊರತೆಯು ಇರುವುದಾಗಿ ತಿಳಿಸಿದಾಗ, ಅಧ್ಯಕ್ಷರು ಈ ಎಲ್ಲಾ ಮಾಹಿತಿಗಳನ್ನೊಳಗೊಂಡ ಸಮಗ್ರ ವಿವರಗಳನ್ನು ಹಾಗೂ ದಕ್ಷಿಣ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ಮಾಹಿತಿಯನ್ನು ಸಮಿತಿಗೆ ಸಲ್ಲಿಸಲು ಜಂಟಿ ಆಯುಕ್ತರು (ದಕ್ಷಿಣ) ರವರಿಗೆ ಸೂಚಿಸಿದರು.

ಜಂಟಿ ಆಯುಕ್ತರು (ಪೂರ್ವ) ರವರ ಪರವಾಗಿ ಶ್ರೀಮತಿ ಲಕ್ಷ್ಮೀದೇವಿ, ಉಪ ಆಯುಕ್ತರು ಮಾತನಾಡುತ್ತಾ, ಪೂರ್ವ ವಲಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿ, ಕಾಮಗಾರಿಗಳ ನಿರ್ವಹಣೆ ಮತ್ತು ತೆರಿಗೆ ವಸೂಲಾತಿಯನ್ನು ನಿಯಮಾನುಸಾರ ಮಾಡುತ್ತಿರುವುದಾಗಿ ತಿಳಿಸಿ, ಸದರಿ ವಲಯಕ್ಕೆ ರೂ.372 ಕೋಟಿಗಳ ಆಸ್ತಿ ತೆರಿಗೆಯನ್ನು ನಿಗಧಿಪಡಿಸಿದ್ದು, ಪ್ರತಿ ಬುಧವಾರ collection drive ಕಾರ್ಯಕ್ರಮವನ್ನು ಹಾಕಿಕೊಂಡು, ಇದುವರೆಗೆ ಸುಮಾರು ರೂ.312.00 ಕೋಟಿಗಳ ಮೊತ್ತವನ್ನು ವಸೂಲಾತಿ ಮಾಡಿರುವುದಾಗಿ ತಿಳಿಸಿದರು. ಗಣಕಯಂತ್ರ ನಿರ್ವಾಹಕರ ಕೊರತೆ ಇದ್ದು, ಗಣಕಯಂತ್ರ ನಿರ್ವಾಹಕರನ್ನು ವಲಯವಾರು ಕಛೇರಿಗಳಿಗನುಗುಣವಾಗಿ ನಿಯೋಜಿಸಲು ಕ್ರಮ ಕೈಗೊಳ್ಳಬೇಕೆಂದು ಹಾಗೂ ಗಣಕಯಂತ್ರ ನಿರ್ವಾಹಕರನ್ನು ಆಗಿಂದಾಗ್ಗೆ ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳಲು ಕೋರಿದರು. ವಲಯಗಳಲ್ಲಿ ಮಾಹಿತಿ ಹಕ್ಕು ಪ್ರಕರಣ, ಲೋಕಾಯುಕ್ತ ಮತ್ತು ನ್ಯಾಯಲಯಗಳ ಪ್ರಕರಣಗಳಿಗೆ ಅಧಿಕಾರಿಗ/ಸಿಬ್ಬಂದಿಗಳು ಆಗಿಂದಾಗ್ಗೆ ಸಂಬಂಧಪಟ್ಟ ಕಛೇರಿಗಳಿಗೆ/ನ್ಯಾಯಾಲಯಕ್ಕೆ

ಹೋಗಬೇಕಾಗಿರುವುದರಿಂದ, ಸಮಯದ ಅಭಾವ ಬಹಳವಾಗಿ ಉಂಟಾಗಿ ಕೆಲಸ ಕಾರ್ಯಗಳಿಗೆ ಅಡಚಣೆ ಆಗುತ್ತಿದ್ದು, ವಲಯಕ್ಕೆ ಒಬ್ಬರಂತೆ ವಕೀಲರನ್ನು ನೇಮಿಸಿದರೆ ಆಯಾ ವಲಯದ ಮಾಹಿತಿ ಹಕ್ಕು ಪ್ರಕರಣಗಳ, ಲೋಕಾಯುಕ್ತ ಮತ್ತು ನ್ಯಾಯಾಲಯಗಳ ಪ್ರಕರಣಗಳಿಗೆ ಹಾಜರಾಗಿ ಅವುಗಳ ಮೇಲ್ವಿಚಾರಣೆಯನ್ನು ನಿರ್ವಹಿಸಿದರೆ, ಅಧಿಕಾರಿ/ಸಿಬ್ಬಂದಿಗಳು ಇತರೆ ಕಛೇರಿ ಕೆಲಸಗಳ ಕಡೆಗೆ ಒತ್ತು ನೀಡಲು ಸಹಾಯವಾಗುವುದಾಗಿ ತಿಳಿಸಿದರು. ಪಾಲಿಕೆಯ ಕೆಲವು ಕಛೇರಿಗಳಲ್ಲಿ ಮಹಿಳಾ ಮತ್ತು ಅಧಿಕಾರಿ/ ಸಿಬ್ಬಂದಿಗಳ ಶೌಚಾಲಯಗಳ ಕೊರತೆ ಇದ್ದು, ಶೌಚಾಲಯಗಳ ನಿರ್ಮಾಣಕ್ಕೆ ಮತ್ತು ನಿರ್ವಹಣೆಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದರು. ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿ ಮೇಲ್ಕಂಡ ಎಲ್ಲಾ ವಿವರಗಳನ್ನು ಸಮಿತಿಗೆ ಲಿಖಿತವಾಗಿ ಸಲ್ಲಿಸಲು ಅಧ್ಯಕ್ಷರು ಸೂಚಿಸಿದರು.

ಜಂಟಿ ಆಯುಕ್ತರು (ಮಹದೇವಪುರ) ರವರು ಮಾತನಾಡುತ್ತಾ, ಸದರಿ ವಲಯದಲ್ಲಿ ಸಿಬ್ಬಂದಿಗಳ ಕೊರತೆ ಬಹಳವಾಗಿ ಇರುವುದಾಗಿ ತಿಳಿಸುತ್ತಾ, ಈಗಾಗಲೇ ಈ ಬಗ್ಗೆ ಆಡಳಿತ ವಿಭಾಗಕ್ಕೆ ಹಲವಾರು ಬಾರಿ ಪತ್ರವನ್ನು ನೀಡಿ ಸಿಬ್ಬಂದಿಗಳನ್ನು ನಿಯೋಜಿಸಲು ಕೋರಿದ್ದರೂ ಯಾವುದೇ ಪ್ರಯೋಜನವಾಗಿರುವುದಿಲ್ಲವೆಂದು ತಿಳಿಸಿದರು. ಸಮಿತಿಯ ಸದಸ್ಯರಾದ ಶ್ರೀ ಎಂ.ಎನ್.ಶ್ರೀಕಾಂತ್ (ಪುಟ್ಟ) ರವರು ಮಾತನಾಡುತ್ತಾ, ಮಹದೇವಪುರ ವಲಯದಲ್ಲಿ ಸಿಬ್ಬಂದಿ ಕೊರತೆ ಇರುವುದಾಗಿ ತಿಳಿಸಿ, ಈ ಬಗ್ಗೆ ಸೂಕ್ತ ಕ್ರಮ ವಹಿಸಲು ಅಧ್ಯಕ್ಷರನ್ನು ಕೋರಿದರು. ಮಹದೇವಪುರ ವಲಯಕ್ಕೆ ರೂ.620 ಕೋಟಿಗಳ ಆಸ್ತಿ ತೆರಿಗೆಯನ್ನು ನಿಗಧಿಪಡಿಸಿದ್ದು ಕಂದಾಯ ವಸೂಲಾತಿಗೆ ಸೂಕ್ತ ಕ್ರಮ ಕೈಗೊಂಡಿರುವುದಾಗಿ ತಿಳಿಸಿದರು. ವಲಯದಲ್ಲಿ ಘನತ್ಯಾಜ್ಯ ನಿರ್ವಹಣೆ ಮತ್ತು ಇತರೆ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದಾಗಿ ತಿಳಿಸಿದರು.

ಜಂಟಿ ಆಯುಕ್ತರು (ಯಲಹಂಕ) ರವರು ಮಾತನಾಡುತ್ತಾ, ಯಲಹಂಕ ವಲಯದಲ್ಲಿ ಒಟ್ಟು 11 ವಾರ್ಡ್‌ಗಳು ಇದ್ದು, ರೂ.120 ಕೋಟಿಗಳ ಆಸ್ತಿ ತೆರಿಗೆಯನ್ನು ನಿಗಧಿಪಡಿಸಿದ್ದು ಇದುವರೆಗೆ ಸುಮಾರು ರೂ. 86 ಕೋಟಿಗಳ ಮೊತ್ತವನ್ನು ವಸೂಲಾತಿ ಮಾಡಿರುವುದಾಗಿ ತಿಳಿಸಿದರು. ಸದರಿ ವಲಯದಲ್ಲಿ ಅಧೀಕ್ಷಕ ಅಭಿಯಂತರವರ ಹುದ್ದೆ ಖಾಲಿ ಇದ್ದು, ಸಮರ್ಪಕವಾಗಿ ಘನತ್ಯಾಜ್ಯ ನಿರ್ವಹಣಾ ಕೆಲಸ ಕಾರ್ಯಗಳನ್ನು ನಡೆಸುವ ಹಿತದೃಷ್ಟಿಯಿಂದ ಅಧೀಕ್ಷಕ ಅಭಿಯಂತರವರನ್ನು ನಿಯೋಜಿಸಲು ಕ್ರಮ ಕೈಗೊಳ್ಳಲು ಕೋರಿದರು. ಸದರಿ ವಲಯದಲ್ಲಿ ಬೃಹತ್ ನೀರುಗಾಲುವೆಗಳು ಇದ್ದು, ಮಳೆಯ ಸಂದರ್ಭದಲ್ಲಿ ಕಾಲುವೆಗಳಲ್ಲಿ ನೀರು ತುಂಬಿ ತೊಂದರೆ ಉಂಟಾಗುತ್ತಿರುವುದಾಗಿ, ಈ ವಿಷಯವು ಬೃಹತ್ ರಸ್ತೆಗಳು ಮತ್ತು ಬೃಹತ್ ನೀರುಗಾಲುವೆ ವಿಭಾಗದ ವ್ಯಾಪ್ತಿಗೆ ಒಳಪಟ್ಟಿದ್ದರೂ ಸಂಬಂದಪಟ್ಟವರು ಯಾವುದೇ ಕ್ರಮವನ್ನು

ವಹಿಸಿರುವುದಿಲ್ಲವೆಂದು ತಿಳಿಸಿದರು ಮತ್ತು ಕೇಂದ್ರ ಕಛೇರಿಯಿಂದ ರಸ್ತೆ ಅಗೆತಗಳಿಗೆ ಅನುಮತಿಯನ್ನು ಪಡೆದು ರಸ್ತೆ ಅಗೆತಗಳನ್ನು ಮಾಡಿ ಅವುಗಳನ್ನು ಸರಿಯಾಗಿ ಮುಚ್ಚದೇ ಹಾಗೆ ಬಿಡುತ್ತಿದ್ದು, ಇದರಿಂದ ರಸ್ತೆ ಗುಂಡಿಗಳು ಬಿದ್ದು ಬಹಳ ತೊಂದರೆಯಾಗುತ್ತಿರುವುದಾಗಿ ತಿಳಿಸಿ, ರಸ್ತೆ ಅಗೆತಕ್ಕೆ ಅನುಮತಿ ನೀಡುವ ಇಲಾಖೆಯವರು ಆಯಾ ವಲಯಗಳಿಗೆ ರಸ್ತೆ ಅಗೆತಕ್ಕೆ ನೀಡಿರುವ ಅನುಮತಿ ಪತ್ರದ ಪ್ರತಿಯನ್ನು ಮುಂಚಿತವಾಗಿ ಕಳುಹಿಸಿದ್ದಲ್ಲಿ ವಲಯ ವ್ಯಾಪ್ತಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಅನುಕೂಲವಾಗುವುದಾಗಿ ತಿಳಿಸಿದರು. ಈ ಬಗ್ಗೆ ಪ್ರತಿಕ್ರಯಿಸಿದ ಅಧ್ಯಕ್ಷರು ಸಂಬಂಧಪಟ್ಟ ಇಲಾಖೆಗಳು ಪರಸ್ಪರ ಸಹಕರಿಸಿ ಮಾಹಿತಿ ವಿನಿಮಯ ಮಾಡಿಕೊಂಡು co-ordination ನೊಂದಿಗೆ ಕಾರ್ಯ ನಿರ್ವಹಿಸಲು ತಿಳಿಸಿ ಅಪರ ಆಯುಕ್ತರು (ಆಡಳಿತ) ಮತ್ತು ಪ್ರಧಾನ ಅಭಿಯಂತರರವರು ಈ ಬಗ್ಗೆ ಕ್ರಮ ಜರುಗಿಸಬೇಕೆಂದು ಆದೇಶಿಸಿದರು.

ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರು ಮಾತನಾಡುತ್ತಾ, ಸದರಿ ವಲಯದಲ್ಲಿ ತೋಟಗಾರಿಕಾ ಇಲಾಖೆ, ಕಲ್ಯಾಣ ಇಲಾಖೆ ಮತ್ತು ಜಾಹಿರಾತು ಇಲಾಖೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಧಿಕಾರಿಗಳು ಇರುವುದಿಲ್ಲವೆಂದು ಮತ್ತು ಸಿಬ್ಬಂದಿಗಳ ಕೊರತೆಯು ಹೆಚ್ಚಾಗಿರುವುದಾಗಿ ತಿಳಿಸಿದರು. ಈ ಬಗ್ಗೆ ಈಗಾಗಲೇ ಆಡಳಿತ ವಿಭಾಗಕ್ಕೆ ಸಿಬ್ಬಂದಿಗಳನ್ನು ನಿಯೋಜಿಸಲು ಪ್ರಸ್ತಾವನೆ ಸಲ್ಲಿಸಿರುವುದಾಗಿ ತಿಳಿಸಿದರು. ಸದರಿ ವಲಯಕ್ಕೆ ರೂ.300 ಕೋಟಿಗಳ ಆಸ್ತಿ ತೆರಿಗೆಯನ್ನು ನಿಗಧಿಪಡಿಸಿದ್ದು ಇದುವರೆಗೆ ಸುಮಾರು ರೂ. 138 ಕೋಟಿಗಳ ಮೊತ್ತವನ್ನು ವಸೂಲಾತಿ ಮಾಡಿರುವುದಾಗಿ ತಿಳಿಸಿದರು. ವಲಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದಾಗಿ ತಿಳಿಸಿದರು.

ಜಂಟಿ ಆಯುಕ್ತರು (ರಾಜರಾಜೇಶ್ವರಿನಗರ) ರವರು ಮಾತನಾಡುತ್ತಾ, ರಾಜರಾಜೇಶ್ವರಿ ನಗರ ವ್ಯಾಪ್ತಿಯಲ್ಲಿ ಒಟ್ಟು 14 ವಾರ್ಡ್‌ಗಳಿದ್ದು, ವಲಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಮತ್ತು ಇತರೆ ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದಾಗಿ ತಿಳಿಸಿದರು. ಸದಸ್ಯರು ಮಾತನಾಡುತ್ತ, ವಲಯ ಕಛೇರಿಯಲ್ಲಿ ಕಡತಗಳ ವಿಲೇವಾರಿಯಲ್ಲಿ ವಿಳಂಭವಾಗುತ್ತಿರುವುದಾಗಿ ದೂರುಗಳು ಬರುತ್ತಿವೆಯೆಂದು ತಿಳಿಸಿದಾಗ, ಜಂಟಿ ಆಯುಕ್ತರು ಯಾವುದೇ ಕಡತಗಳ ವಿಲೇವಾರಿಯಲ್ಲಿ ವಿಳಂಭ ಮಾಡುತ್ತಿರುವುದಿಲ್ಲವೆಂದು ನಿಯಮಾನುಸಾರ ಕಡತಗಳ ವಿಲೇವಾರಿಯನ್ನು ನಿರ್ವಹಿಸುವುದಾಗಿ ಸಭೆಗೆ ತಿಳಿಸಿದರು. ಸದರಿ ವಲಯಕ್ಕೆ ರೂ.99 ಕೋಟಿಗಳ ಆಸ್ತಿ ತೆರಿಗೆಯನ್ನು ನಿಗಧಿಪಡಿಸಿದ್ದು ಇದುವರೆಗೆ ಸುಮಾರು ರೂ. 92 ಕೋಟಿಗಳ ಮೊತ್ತವನ್ನು ವಸೂಲಾತಿ ಮಾಡಿರುವುದಾಗಿ ತಿಳಿಸಿದರು.

ಉಪ ಅಯುಕ್ತರು (ಪಶ್ಚಿಮ) ರವರು ಮಾತನಾಡುತ್ತ ಸದರಿ ವಲಯದಲ್ಲಿ ಒಟ್ಟು 44 ವಾರ್ಡ್‌ಗಳು ಇದ್ದು, ವಲಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಮತ್ತು ಇತರೆ ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ

ನಿರ್ವಹಿಸುತ್ತಿರುವುದಾಗಿ ತಿಳಿಸಿದರು. ಕಛೇರಿಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದಾಗಿ ತಿಳಿಸುತ್ತಾ, ಸಿಬ್ಬಂದಿಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ಕೋರಿದರು. ಸದರಿ ವಲಯಕ್ಕೆ ರೂ.380 ಕೋಟಿಗಳ ಆಸ್ತಿ ತೆರಿಗೆಯನ್ನು ನಿಗಧಿಪಡಿಸಿದ್ದು ಇದುವರೆಗೆ ಸುಮಾರು ರೂ. 190 ಕೋಟಿಗಳ ಮೊತ್ತವನ್ನು ವಸೂಲಾತಿ ಮಾಡಿರುವುದಾಗಿ ತಿಳಿಸಿದರು. ಈ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಲಿಖಿತವಾಗಿ ಸಮಿತಿಗೆ ಸಲ್ಲಿಸಲು ಉಪ ಆಯುಕ್ತರು (ಪಶ್ಚಿಮ) ರವರಿಗೆ ಅಧ್ಯಕ್ಷರು ಸೂಚಿಸಿದರು.

ಅಧ್ಯಕ್ಷರು ಮಾತನಾಡುತ್ತಾ ಪಾಲಿಕೆಯ ಎಲ್ಲಾ ಕಛೇರಿಗಳಲ್ಲಿಯೂ ವಿವಿಧ ರೀತಿಯ ಕಡತಗಳು ಹಲವಾರು ವರ್ಷಗಳು/ತಿಂಗಳುಗಳು/ದಿನಗಳಿಂದ ವಿಲೇವಾರಿಯಾಗದೇ ಬಾಕಿ ಇರುವುದು ಕಂಡುಬಂದಿರುತ್ತದೆ. ಇದರಿಂದ ಸಾರ್ವಜನಿಕರಿಗೆ ಬಹಳಷ್ಟು ತೊಂದರೆ ಉಂಟಾಗುತ್ತಿರುವುದಲ್ಲದೆ, ಅಭಿವೃದ್ಧಿ ಕಾರ್ಯಗಳೂ ಸಹ ಕುಂಠಿತಗೊಂಡಿರುತ್ತದೆ. ಆದ್ದರಿಂದ ಪಾಲಿಕೆಯ ಎಲ್ಲಾ ಕಛೇರಿಗಳಲ್ಲಿಯೂ ಬಾಕಿ ಇರುವ ಕಡತಗಳನ್ನು 07 ದಿವಸಗಳ ಒಳಗಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಿದರು. ಎಫ್.ಎಂ.ಎಸ್ ಮತ್ತು ಎಲ್.ಎಂ.ಎಸ್ ಅನ್ನು ತುರ್ತಾಗಿ ಅಳವಡಿಸಿಕೊಳ್ಳಲು ತಿಳಿಸಿದರು.

ಮುಂದುವರಿದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಛೇರಿಗಳಲ್ಲಿ ಅಧಿಕಾರಿ/ನೌಕರರ ಚಲನವಲನ, ಅಪರಿಚಿತ ವ್ಯಕ್ತಿಗಳ ಮಾಹಿತಿ, ಕಛೇರಿಗಳಿಗೆ ಬಂದು ಹೋಗುವವರ ಮಾಹಿತಿ, ಕಛೇರಿ ಸಂಕೀರ್ಣಗಳಲ್ಲಿ ನಡೆಯಬಹುದಾದ ಅಕ್ರಮಗಳನ್ನು ತಡೆಯುವ ಸಲುವಾಗಿ ಹಾಗೂ ಆಡಳಿತದಲ್ಲಿ ಹೆಚ್ಚಿನ ಪಾರದರ್ಶಕತೆ ತರಲು ಮತ್ತು ದಾಖಲೆಗಳ ರಕ್ಷಣೆಗಾಗಿ ಪಾಲಿಕೆಯ ಎಲ್ಲಾ ಕಛೇರಿಗಳಲ್ಲಿಯೂ ಸಿ.ಸಿ.ಟಿ.ವಿ ಕ್ಯಾಮರಾ ವ್ಯವಸ್ಥೆಯನ್ನು ಅಳವಡಿಸುವುದು ಅತ್ಯವಶ್ಯಕವಾಗಿರುತ್ತದೆಂದು, ಈ ಹಿನ್ನೆಲೆಯಲ್ಲಿ ಪಾಲಿಕೆಯ ಎಲ್ಲಾ ಕಛೇರಿಗಳಲ್ಲಿ ಮತ್ತು ಆವರಣಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾ ವ್ಯವಸ್ಥೆಯನ್ನು 15 ದಿವಸಗಳ ಒಳಗಾಗಿ ಅಳವಡಿಸಲು ಸೂಚಿಸಲು ಕ್ರಮ ಕೈಗೊಳ್ಳಲು ಹಾಗೂ ಹಾಲಿ ಈಗಾಗಲೇ ಕೇಂದ್ರ ಕಛೇರಿ ಸೇರಿದಂತೆ ಹಲವು ಕಛೇರಿಗಳಲ್ಲಿ ಸಿ.ಸಿ.ಟಿ.ವಿ.ಕ್ಯಾಮರಾವನ್ನು ಅಳವಡಿಸಲಾಗಿದ್ದು, ಇವುಗಳಲ್ಲಿ ಕೆಲವು ದುರಸ್ಥಿಗೊಂಡಿರುವುದರಿಂದ ಯಾವುದೇ ಪ್ರಯೋಜನವಿಲ್ಲದಂತಾಗಿರುವುದರಿಂದ ಕೂಡಲೇ ದುರಸ್ಥಿಗೊಂಡಿರುವ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಪಾಲಿಕೆಯ ಎಲ್ಲಾ ಕಛೇರಿಗಳಲ್ಲಿಯೂ ಆನ್‌ಲೈನ್ ವ್ಯವಸ್ಥೆ ಜಾರಿಯಲ್ಲಿದ್ದು, ಸಾರ್ವಜನಿಕರು ಆನ್‌ಲೈನ್‌ನಲ್ಲಿ ಕೆಲವು ದೂರುಗಳನ್ನು ಸಲ್ಲಿಸುತ್ತಿರುತ್ತಾರೆ. ಆದರೆ, ಆನ್‌ಲೈನ್‌ನಲ್ಲಿ ಸಲ್ಲಿಸುವ ದೂರುಗಳಿಗೆ ಅಧಿಕಾರಿಗಳು ಸ್ಪಂದಿಸುತ್ತಿರುವುದಿಲ್ಲವೆಂದು ಸಾರ್ವಜನಿಕರಿಂದ ಮತ್ತು ಜನಪ್ರತಿನಿಧಿಗಳಿಂದ ದೂರುಗಳು

ಬರುತ್ತಿರುತ್ತವೆ. ಈ ಹಿನ್ನೆಲೆಯಲ್ಲಿ ಆನ್‌ಲೈನ್ ದೂರುಗಳು ಬಂದ ಕೂಡಲೇ ಅವುಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು. ಆನ್‌ಲೈನ್‌ನಲ್ಲಿ ದೂರುಗಳನ್ನು ಸಲ್ಲಿಸಲು ಅವಕಾಶವಿರುವ ಬಗ್ಗೆ ಸಾರ್ವಜನಿಕರಿಗೆ ತಿಳಿಸುವ ಸಲುವಾಗಿ ಸೂಕ್ತ ಪ್ರಚಾರ ನೀಡಲು ತಿಳಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಛೇರಿಗಳಲ್ಲಿ ಸಾರ್ವಜನಿಕ ಭೇಟಿ ಸಮಯವನ್ನು ಅಪರಾಹ್ನ 3.00 ರಿಂದ 5.00 ಗಂಟೆಯವರೆಗೆ ನಿಗಧಿಪಡಿಸಿ ಆದೇಶ ಹೊರಡಿಸಲಾಗಿದ್ದರೂ, ಈ ಆದೇಶಕ್ಕೆ ವಿರುದ್ಧವಾಗಿ ಕಛೇರಿ ಸಮಯದಲ್ಲಿ ಅಂದರೆ ಬೆಳಗ್ಗಿನ ವೇಳೆಯಲ್ಲಿಯೂ ಸಹ ಸಾರ್ವಜನಿಕರು, ಸೇಲ್ಸ್‌ಮ್ಯಾನ್‌ಗಳು, ಭಿಕ್ಷುಕರು, ದಲ್ಲಾಳಿಗಳು, ಚಂದಾ ಎತ್ತುವವರು ಕಛೇರಿಗೆ ಆಗಮಿಸಿ ಅಧಿಕಾರಿ/ನೌಕರರು ಸುಗಮವಾಗಿ ಕರ್ತವ್ಯ ನಿರ್ವಹಿಸಲು ತೊಂದರೆ ಉಂಟುಮಾಡುತ್ತಿರುವುದು ಸಮಿತಿಯ ಗಮನಕ್ಕೆ ಬಂದಿದ್ದು, ಅಧಿಕಾರಿ/ನೌಕರರು ತಮಗೆ ವಹಿಸಿರುವ ಕೆಲಸಕಾರ್ಯಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಲು ಯಾವುದೇ ರೀತಿಯ ಅಡೆತಡೆಗಳು ಇಲ್ಲದೆ ಕಛೇರಿಯಲ್ಲಿ ಉತ್ತಮ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ಪ್ರಥಮ ಹಂತವಾಗಿ ಸಾರ್ವಜನಿಕ ಭೇಟಿ ಸಮಯವನ್ನು ಕಡ್ಡಾಯವಾಗಿ ಅಪರಾಹ್ನ 3.00 ರಿಂದ 5.00 ಗಂಟೆಯವರೆಗೆ ನಿಗಧಿಪಡಿಸುವುದು ಬಹಳ ಮುಖ್ಯವಾಗಿದ್ದು, ಉಳಿದ ಸಂದರ್ಭದಲ್ಲಿ ಸಾರ್ವಜನಿಕ ಭೇಟಿಯನ್ನು ನಿಷೇಧಿಸುವ ಸಲುವಾಗಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು. ಆದ್ದರಿಂದ, ಈ ನಿಟ್ಟಿನಲ್ಲಿ ಪಾಲಿಕೆಯ ಕಛೇರಿಗಳಿಗೆ ಉತ್ತಮ ಭದ್ರತಾ ವ್ಯವಸ್ಥೆಯನ್ನು ಒದಗಿಸಿಕೊಳ್ಳುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಕಛೇರಿಗಳಲ್ಲಿ ಸುಗಮ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ಗಣಕಯಂತ್ರ ನಿರ್ವಾಹಕರುಗಳನ್ನು ನಿಯೋಜಿಸಿಕೊಂಡು ಕೆಲಸಕಾರ್ಯಗಳನ್ನು ನಿರ್ವಹಿಸಲಾಗುತ್ತಿರುತ್ತದೆ. ಹೀಗೆ ನಿಯೋಜನೆಗೊಂಡಿರುವ ಗಣಕಯಂತ್ರ ನಿರ್ವಾಹಕರುಗಳು ಹಲವಾರು ವರ್ಷಗಳಿಂದ ಒಂದೇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸಮಿತಿಯ ಗಮನಕ್ಕೆ ಬಂದಿದ್ದು, ಪಾಲಿಕೆಯ ಆಡಳಿತಾತ್ಮಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಮತ್ತು ಕಛೇರಿ ಕೆಲಸ ಕಾರ್ಯಗಳು ಸುಗಮ ರೀತಿಯಲ್ಲಿ ನಡೆಯುವ ಸಲುವಾಗಿ ಕೂಡಲೇ ಒಂದೇ ಕಛೇರಿಯಲ್ಲಿ ದೀರ್ಘಾವದಿಯಿಂದ ಕಾರ್ಯನಿರ್ವಹಿಸುತ್ತಿರುವ ಗಣಕಯಂತ್ರ ನಿರ್ವಾಹಕರನ್ನು ಪಾಲಿಕೆಯ ವಿವಿಧ ಕಛೇರಿಗಳಿಗೆ ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಅಪರ ಆಯುಕ್ತರು (ಆಡಳಿತ) ರವರಿಗೆ ಸೂಚಿಸಿದರು.

ಈ ಹಿಂದೆ ಪಾಲಿಕೆ ಹೊಸ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿಲೀನಾತಿಗೊಂಡ ನೌಕರರನ್ನು (ಕಂದಾಯ ಪರಿವೀಕ್ಷಕರು, ಕಂದಾಯ ವಸೂಲಿಗಾರರು) ಪಾಲಿಕೆಯ ಇತರೆ ಕಛೇರಿಗಳಿಗೆ ವರ್ಗಾವಣೆ ಮಾಡಿ ಆದೇಶಿಸಲಾಗಿದ್ದು, ಸದರಿ ನೌಕರರುಗಳು ಪುನ: ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಕಛೇರಿಗಳಿಗೆ ವರ್ಗಾವಣೆ ಮಾಡಿಸಿಕೊಂಡಿರುವುದು ಸಮಿತಿಯ ಗಮನಕ್ಕೆ ಬಂದಿರುತ್ತದೆ. ಇವರುಗಳು ಬಿಬಿಎಂಪಿ ಗೆ ವಿಲೀನಾತಿ ಹೊಂದಿರುವುದಕ್ಕಿಂತ ಮುಂಚಿತವಾಗಿ ಇದೇ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಹಲವಾರು ಅಕ್ರಮಗಳನ್ನು ಎಸಗಿ ಪಾಲಿಕೆಗೆ ಬಹಳಷ್ಟು ಆರ್ಥಿಕ ನಷ್ಟ ಉಂಟುಮಾಡಿರುವ ಹಿನ್ನೆಲೆಯಲ್ಲಿ ಯಾವುದೇ ಒತ್ತಡಕ್ಕೆ ಒಳಗಾಗದೆ ಎಲ್ಲಾ ನೌಕರರುಗಳನ್ನು ವರ್ಗಾವಣೆ ಮಾಡಲು ಅಧ್ಯಕ್ಷರು ಅಪರ ಆಯುಕ್ತರು (ಆಡಳಿತ) ರವರಿಗೆ ಸೂಚಿಸಿದರು.

ಅಧ್ಯಕ್ಷರು ಮಾತನಾಡುತ್ತಾ, ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಅಪರ ಆಯುಕ್ತರು (ಆಡಳಿತ) ರವರನ್ನು ಕೇಳಿದಾಗ, ಈ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸುವುದಾಗಿ ತಿಳಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳೆದ ಹಲವಾರು ವರ್ಷಗಳಿಂದ ಸಮಾನ ಕೆಲಸಕ್ಕೆ ಸಮಾನ ವೇತನದಡಿಯಲ್ಲಿ ಬೆಂಗಳೂರಿನ ಸ್ವಚ್ಚತೆಗಾಗಿ ದುಡಿಯುತ್ತಿರುವ ಪೌರಕಾರ್ಮಿಕರು, ಗ್ಯಾಂಗ್‌ಮೆನ್‌ಗಳ ಜೀವನ ಪರಿಸ್ಥಿತಿ ಶೋಚನೀಯವಾಗಿದ್ದು, ಇವರುಗಳು ಜೀವನಕ್ಕೆ ಯಾವುದೇ ರೀತಿಯ ಭದ್ರತೆ ಇಲ್ಲದೇ ದುಡಿಯುತ್ತಿದ್ದು, ಇವರನ್ನು ನಂಬಿರುವ ಕುಟುಂಬಗಳು ಕಷ್ಟದಲ್ಲಿರುವುದಾಗಿ ಹಾಗೂ ಈಗಾಗಲೇ ಖಾಯಂಗೊಳ್ಳದೇ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಬಹಳಷ್ಟು ಪೌರಕಾರ್ಮಿಕರು ಹಾಗೂ ಗ್ಯಾಂಗ್‌ಮೆನ್‌ಗಳು ಮರಣಹೊಂದಿದ್ದು, ಇವರ ಅವಲಂಬಿತ ಕುಟುಂಬಗಳಿಗೆ ಸರ್ಕಾರದಿಂದ ಅಥವಾ ಪಾಲಿಕೆಯಿಂದ ಯಾವುದೇ ರೀತಿಯ ಅನುಕಂಪದ ಹುದ್ದೆಯನ್ನಾಗಲಿ ಅಥವಾ ಆರ್ಥಿಕ ಸಹಾಯವನ್ನಾಗಲೀ ನೀಡಿರುವುದಿಲ್ಲ. ಈ ರೀತಿಯ ಬಹಳಷ್ಟು ನೌಕರರು ನಿವೃತ್ತಿ ಅಂಚಿಗೆ ತಲುಪಿದ್ದು ಸದರಿ ನೌಕರರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿದ್ದು, ಈ ಹುದ್ದೆಗಳಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು, ಗ್ಯಾಂಗ್‌ಮೆನ್‌ಗಳು, ವಾಹನ ಚಾಲಕರನ್ನು ಖಾಯಂಗೊಳಿಸಲು ದಿನಾಂಕ: 28-01-2015 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ನಿರ್ಣಯವನ್ನು ಅಂಗೀಕರಿಸಲಾಗಿದ್ದರೂ ಹಾಗೂ ಸರ್ಕಾರದ ಅಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ (ಬಿಬಿಎಂಪಿ) ಯಿಂದ ಸದರಿ ನೌಕರರನ್ನು ಖಾಯಂಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದರೂ ಇದುವರೆವಿಗೂ ಈ

ಬಗ್ಗೆ ಯಾವುದೇ ಕ್ರಮವನ್ನು ವಹಿಸಿರುವುದಿಲ್ಲವೆಂದು, ಈ ಹಿನ್ನಲೆಯಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ಯಾಂಗ್‌ಮೆನ್, ಪೌರಕಾರ್ಮಿಕರು, ವಾಹನಚಾಲಕರು ಹಾಗೂ ಇತರೆ ಸಿಬ್ಬಂದಿಗಳನ್ನು ಖಾಯಂಗೊಳಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ತುರ್ತಾಗಿ ಕ್ರಮಕೈಗೊಳ್ಳುವಂತೆ ಸದಸ್ಯರಾದ ಶ್ರೀ ಪಿ.ವಿ.ಮಂಜುನಾಥ (ಬಾಬು) ರವರು ಅಪರ ಆಯುಕ್ತರು (ಆಡಳಿತ) ರವರನ್ನು ಕೋರಿದರು.

ಮಾಹಿತಿ ತಂತ್ರಜ್ಞಾನ ಸಲಹೆಗಾರರು ಮಾತನಾಡುತ್ತಾ, ಸದರಿ ಕಛೇರಿಯಲ್ಲಿ ಅಭಿಯಂತರರ/ಸಿಬ್ಬಂದಿ ಕೊರತೆ ಇದ್ದು, ಶೀಘ್ರವಾಗಿ ಕಛೇರಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅಡಚಣೆ ಉಂಟಾಗುತ್ತಿರುವುದಾಗಿ ತಿಳಿಸಿದರು. ಪಾಲಿಕೆಯ ಎಲ್ಲಾ ಇಲಾಖೆಗಳಲ್ಲಿನ ಸಂಪೂರ್ಣ ಕೆಲಸ ಕಾರ್ಯಗಳನ್ನು ಗಣಕೀಕೃತ ಗೊಳಿಸಲು ಸೂಕ್ತ ಯೋಜನೆಗಳನ್ನು ರೂಪಿಸಲಾಗಿರುತ್ತದೆಂದು, ಈ ನಿಟ್ಟಿನಲ್ಲಿ ಈಗಾಗಲೇ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆಂದು ತಿಳಿಸಿದರು. ಕಛೇರಿಗಳಲ್ಲಿ ಗಣಕ ಯಂತ್ರಗಳ ಕೊರತೆ ಇರುವುದಾಗಿ ತಿಳಿಸಿದರು. d-centralize ಮಾಡಿದರೆ ಉತ್ತಮ ಎಂದು ತಿಳಿಸಿದರು. ಯಾವುದೇ agency ಗೆ maintenance ಅನ್ನು ನೀಡಿರುವುದಿಲ್ಲವೆಂದು ತಿಳಿಸಿದರು. ಅಧ್ಯಕ್ಷರು ಮಾಹಿತಿ ತಂತ್ರಜ್ಞಾನ ಶಾಖೆಗೆ ಸಂಬಂಧಪಟ್ಟ ಸಮಗ್ರ ಮಾಹಿತಿಗಳನ್ನು ಲಿಖಿತ ರೂಪದಲ್ಲಿ ಸಮಿತಿಗೆ ಸಲ್ಲಿಸಲು ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಸೂಚಿಸಿದರು.

ಅಧ್ಯಕ್ಷರು ಮಾತನಾಡುತ್ತ ನಗರಯೋಜನೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳ ವಿವರಣೆ ನೀಡುವಂತೆ ಸೂಚಿಸಿದರು.

ಜಂಟಿ ನಿರ್ದೇಶಕರು ನಗರಯೋಜನೆ (ಉತ್ತರ) ರವರು ಕೇಂದ್ರ ಕಛೇರಿ ನಗರ ಯೋಜನೆ ವಿಭಾಗದಲ್ಲಿ ಅಪರ ನಿರ್ದೇಶಕರು ನಗರಯೋಜನೆ ಹುದ್ದೆ, ಜಂಟಿ ನಿರ್ದೇಶಕರ ಹುದ್ದೆಗಳು, ಉಪ ನಿರ್ದೇಶಕರ ಹುದ್ದೆಗಳು ಹಾಗೂ ಸಹಾಯಕ ನಿರ್ದೇಶಕರ ಹುದ್ದೆ ಮತ್ತು ಸಹಾಯಕ ಅಭಿಯಂತರರ ಹುದ್ದೆಗಳಿರುವುದಾಗಿ ತಿಳಿಸಿದರು. ಹಾಲಿ ತಮ್ಮ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವೃಂದದ ಅಭಿಯಂತರರುಗಳು ವಿವರಗಳನ್ನು ನೀಡುವಂತೆ ಅಧ್ಯಕ್ಷರು ತಿಳಿಸಿದರು.

.

ಅಧ್ಯಕ್ಷರು ಮಾತನಾಡುತ್ತಾ, ನಗರಯೋಜನೆ ಇಲಾಖೆಗೆ ಯಾವ ಇಲಾಖೆಯಿಂದ ಅಧಿಕಾರಿಗಳನ್ನು ನೇಮಿಸಬಹುದು ಎಂಬುದರ ಬಗ್ಗೆ ವಿವರಣೆ ನೀಡಲು ಉಪ ಆಯುಕ್ತರು(ಆಡಳಿತ)ರವರಿಗೆ ತಿಳಿಸಿದರು.

ಉಪ ಆಯುಕ್ತರು(ಆಡಳಿತ)ರವರು ನಿಯಮಾನುಸಾರ ನಗರಯೋಜನೆ ಇಲಾಖೆಯಿಂದ ನಿಯೋಜನೆಗೊಂಡಿರುವ ಅಭಿಯಂತರರುಗಳು ಕಾರ್ಯನಿರ್ವಹಿಸಬೇಕಾಗಿರುತ್ತದೆ ಎಂದು ತಿಳಿಸಿದರು. ಆದರೆ ಹಾಲಿ ನಗರಯೋಜನೆ ವಿಭಾಗಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದ ಹಾಗೂ ಇನ್ನಿತರೆ ಇಲಾಖೆಗಳಿಂದ ಎರವಲುಸೇವೆಯ ಮೇಲೆ ನಿಯೋಜನೆಗೊಂಡಿರುವ ಅಭಿಯಂತರರುಗಳೇ ಕಾರ್ಯ ನಿರ್ವಹಿಸುತ್ತಿರುವುದಾಗಿ ತಿಳಿಸಿದರು. ಅಧ್ಯಕ್ಷರವರು ಸಮಿತಿಯಲ್ಲಿ ಈ ಕುರಿತಂತೆ ನಿರ್ಣಯ ಕೈಗೊಂಡು ನಗರಯೋಜನಾ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಲೋಕೋಪಯೋಗಿ ಹಾಗೂ ಇತರೆ ಇಲಾಖೆಯ ಅಭಿಯಂತರುಗಳನ್ನು ಬೇರೆಡೆಗೆ ವರ್ಗಾಹಿಸುವ ಸಂಬಂಧ ಅಥವಾ ಮಾತೃ ಇಲಾಖೆಗೆ ಹಿಂದಿರುಗಿಸುವ ಸಂಬಂಧ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಅಧ್ಯಕ್ಷರು ನಗರಯೋಜನೆ ವಿಭಾಗಗಳಲ್ಲಿ ಕಾರ್ಯನಿರ್ವಹಿಸಲು ಕೆಲವು ಅಭಿಯಂತರರುಗಳನ್ನು ಒಂದು ಘಂಟೆ ಅವಧಿಗೆ ನಿಯೋಜಿಸಿರುವುದು ಸಮಂಜಸವೇ ಎಂದು ಪ್ರಶ್ನಿಸಿದರು. ಅಧ್ಯಕ್ಷರು ಈ ರೀತಿ ಒಂದು ಘಂಟೆಯ ಅವಧಿಗೆ ಅಧಿಕಾರಿಗಳನ್ನು ನಿಯೋಜಿಸಲು ಕೆ.ಎಂ.ಸಿ.ಕಾಯ್ದೆ ಅಡಿಯಲ್ಲಿ ಅವಕಾಶವಿದೆಯೇ? ಎಂದು ಕಾನೂನು ಕೋಶ ಮುಖ್ಯಸ್ಥರನ್ನು ಕೇಳಲಾಗಿ, ಕಾನೂನುಕೋಶ ಮುಖ್ಯಸ್ಥರು ಕಾಯ್ದೆಯಲ್ಲಿ ಈ ರೀತಿ ಯಾವುದೇ ಅವಕಾಶಗಳಿರುವುದಿಲ್ಲವೆಂದು ತಿಳಿಸಿರುತ್ತಾರೆ.

ನಂತರ ನಗರಯೋಜನೆ ಇಲಾಖೆಯಲ್ಲಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿದ್ದಂತಹ ಕೆಲವು ಅಭಿಯಂತರರನ್ನು S.W.M, S.W.D, Project ಮತ್ತಿತರ ಸ್ಥಳಗಳಿಗೆ ವರ್ಗಾಹಿಸಿ ಒಂದು ಘಂಟೆಯ ಅವಧಿಗೆ ನಗರಯೋಜನ ವಿಭಾಗಗಳಲ್ಲಿ ಕಾರ್ಯನಿರ್ವಹಿಸುವಂತೆ ಆದೇಶಿಸಿರುವ ಮೇರೆಗೆ ಅಭಿಯಂತರುಗಳು ಬೇರೆ ಸ್ಥಳಗಳಿಗೆ ಹೋಗದೇ ಒಂದು ಘಂಟೆಯ ಅವಧಿಯನ್ನೇ ಪೂರ್ಣಾವಧಿ ಮಾಡಿಕೊಂಡು ನಗರಯೋಜನಾ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿರುತ್ತದೆ ಎಂದು ತಿಳಿಸಿದರು.

ಇದಕ್ಕೆ ಅಧ್ಯಕ್ಷರು ಮಾತನಾಡುತ್ತಾ, ನಗರಯೋಜನಾ ವಿಭಾಗಗಳಲ್ಲಿ ಒಂದು ಘಂಟೆಯ ಅವಧಿಗೆ ಕಾರ್ಯನಿರ್ವಹಿಸುತ್ತಿರುವ ಅಭಿಯಂತರುಗಳು ಮೂಲ ಸ್ಥಳದಲ್ಲಿ ಕಾರ್ಯನಿರ್ವಹಿಸುವ ಸಂಬಂಧ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು ಹಾಗೂ ನಗರಯೋಜನಾ ವಿಭಾಗಗಳಲ್ಲಿ ನಕ್ಷೆಗಳನ್ನು ಆನ್‌ಲೈನ್ ಮುಖೇನವೇ ನಿರ್ವಹಿಸುತ್ತಿರುವ ಬಗ್ಗೆ ವಿವರಣೆ ಕೇಳಲಾಗಿ ಹಾಜರಿದ್ದ ಜಂಟಿ ನಿರ್ದೇಶಕರುಗಳು ನಕ್ಷೆಗಳನ್ನು ಆನ್‌ಲೈನ್ ಮುಖಾಂತರವೇ ಮಂಜೂರಾತಿ ನೀಡುತ್ತಿರುವುದಾಗಿ ತಿಳಿಸಿದರು.

ಅಧ್ಯಕ್ಷರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಾಕಷ್ಟು ಬೋಗಸ್ ಪ್ರಕರಣಗಳು ಕಂಡು ಬರುತ್ತಿದ್ದು, ಇಂತಹ ಪ್ರಕರಣಗಳು ಸಾಕಷ್ಟು ಇವೆ ಎಂದು ತಿಳಿದು ಬಂದಿದ್ದು, ಇನ್ನು ಮುಂದೆ ಎಲ್ಲಾ ವಲಯಗಳಲ್ಲಿ ಮಂಜೂರಾಗುವ ನಕ್ಷೆಯ ಪ್ರತಿ, ಪ್ರಾರಂಭಿಕ ಪ್ರಮಾಣ ಪತ್ರದ ಪ್ರತಿ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರದ ಪ್ರತಿಯನ್ನು ಅಪರ ನಿರ್ದೇಶಕರು (ನಗರಯೋಜನೆ) ರವರ ಕಛೇರಿಗೆ ಕಳುಹಿಸಲು ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು.

ಆಯುಕ್ತರವರ ಕಛೇರಿಯ ಆಡಳಿತ ಶಾಖೆಯಲ್ಲಿ, ವ್ಯವಸ್ಥಾಪಕರು, ಗುಮಾಸ್ತರುಗಳು ಸಾಕಷ್ಟು ವರ್ಷಗಳಿಂದ ಕೆಲಸ ನಿರ್ವಹಿಸುತ್ತಾ ಬರುತ್ತಿದ್ದು, ಇವರುಗಳು ಬೇರೂರಿರುತ್ತಾರೆ. ಆಡಳಿತ ಶಾಖೆಯಲ್ಲಿ ಎಷ್ಟು ಅರ್ಜಿಗಳನ್ನು ಸ್ವೀಕರಿಸಿದೆ, ಎಷ್ಟು ಕಡತಗಳು ಬಾಕಿ ಉಳಿದಿವೆ, ಈ ಬಗ್ಗೆ ಗಮನ ಹರಿಸದೆ ಇದ್ದು, ವರ್ಷಾನುಗಟ್ಟಲೆ ಕಡತಗಳು ಬಾಕಿ ಇರುವುದು ತಿಳಿದು ಬಂದಿರುತ್ತದೆ. ಅಧಿಕಾರಿಗಳು ಇದನ್ನು ಪರಿಶೀಲಿಸದೇ ಇರುವುದು ಸಹ ಶೋಚನಿಯವಾಗಿರುತ್ತದೆ ಎಂದು ಆಕ್ಷೇಪಣೆ ವ್ಯಕ್ತಪಡಿಸಿದರು. ಕೂಡಲೇ ಆಯುಕ್ತರ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವರ್ಗದ ಸಿಬ್ಬಂದಿಗಳನ್ನು ಬೇರೆಡೆಗೆ ವರ್ಗಾಹಿಸುವಂತೆ ತಿಳಿಸಿದರು.

ಪಾಲಿಕೆಯ ಕಂದಾಯ ಇಲಾಖೆ ಹಾಗೂ ಇನ್ನಿತರೆ ಇಲಾಖೆಗಳಲ್ಲಿ ಲಕ್ಷಾಂತರ ರೂಪಾಯಿಗಳ ಹಣ ದುರುಪಯೋಗ ಪ್ರಕರಣಗಳು ಕಂಡು ಬರುತ್ತಲೇ ಇವೆ, ಈ ರೀತಿ ಹಣ ದುರುಪಯೋಗ ಮಾಡಿಕೊಂಡ ನೌಕರರ ಮೇಲೆ ಪಾಲಿಕೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವರದಿ ನೀಡುವಂತೆ ಕೋರಿರುತ್ತಾರೆ.

ಮಧ್ಯಾಹ್ನದ ವೇಳೆ ಕಛೇರಿಯಲ್ಲಿ ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಕಛೇರಿಯಲ್ಲಿ ಉಪಸ್ಥಿತರಿದ್ದು ಸಾರ್ವಜನಿಕರಿಗೆ ಸಂದರ್ಶನನೀಡಿ ಅವರ ಕೆಲಸ ಕಾರ್ಯಗಳಿಗೆ ಒತ್ತು ನೀಡುವಂತೆ ತಿಳಿಸಿದರು. ಅಧ್ಯಕ್ಷರು, ಕಛೇರಿಗಳಲ್ಲಿ ಯಾವುದೇ ರೀತಿಯ ತೊಂದರೆ – ಅಡಚಣೆ ಇದ್ದಲ್ಲಿ ಸಮಿತಿಯ ಗಮನಕ್ಕೆ ತರುವಂತೆ ಸೂಚಿಸಿದರು.

ಅಧ್ಯಕ್ಷರು, ಮುಂದೆ ಕರೆಯುವ ಸಭೆಗೆ ಎಲ್ಲಾ ಅಧಿಕಾರಿಗಳು ಆಯಾ ಇಲಾಖೆಗಳ ಎಲ್ಲಾ ಮಾಹಿತಿಗಳೊಂದಿಗೆ ತಪ್ಪದೇ ಹಾಜರಾಗುವಂತೆ ತಿಳಿಸಿದರು ಹಾಗೂ ವೆಬ್ ಸೈಟ್‌ನಲ್ಲಿ ಮಾಹಿತಿಗಳನ್ನು ಸಮರ್ಪಕವಾಗಿ ಅಪ್‌ಡೇಟ್ ಮಾಡಿರುವುದಿಲ್ಲ ಹಾಗೂ ಇ–ಗವರ್ನೆನ್ಸ್ ಟ್ರಾಕಿಂಗ್ ಸಿಸ್ಟಮ್ ವ್ಯವಸ್ಥೆ ಮಾಡುವಂತೆ ತಿಳಿಸಿದರು.

ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳನ್ನು ಉದ್ದೇಶಿಸಿ ಮಾತನಾಡಿದ ಅಧ್ಯಕ್ಷರು ವಲಯ ಮಟ್ಟದಲ್ಲಿ ಮುಖ್ಯವಾಗಿ ಸ್ವಚ್ಛತೆ ಕೆಲಸ ಕಾರ್ಯಗಳಿಗೆ ಆದ್ಯತೆ ಕೊಟ್ಟು ಸ್ವಚ್ಛ ಬೆಂಗಳೂರು ಅಭಿಯಾನವನ್ನು ಕೈಗೊಳ್ಳಲು ತಿಳಿಸುತ್ತಾ, ನಗರಕ್ಕೆ ಕ್ಲೀನ್ ಸಿಟಿ ಎಂಬ ಹೆಸರು ಬರಲು ಪ್ರಾಮಾಣಿಕ ಪ್ರಯತ್ನ ಮಾಡುವಂತೆ ಹಾಗೂ ಪಾಲಿಕೆ ವ್ಯಾಪ್ತಿಯಲ್ಲಿರುವ ಯಾವೊಂದು ಸ್ವತ್ತನ್ನು ಬಿಡದೆ ಎಲ್ಲಾ ಸ್ವತ್ತುಗಳಿಂದಲೂ ಆಸ್ತಿ ತೆರಿಗೆಯನ್ನು ವಸೂಲಿ ಮಾಡುವ ಸಲುವಾಗಿ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು ಹಾಗೂ ವಲಯ ಕಛೇರಿಗಳಲ್ಲಿ ಸಿಬ್ಬಂದಿಗಳ ಕೊರತೆಯನ್ನು ಸರಿಪಡಿಸುವ ಸಲುವಾಗಿ ಸೂಕ್ತ ಕ್ರಮ ಜರುಗಿಸುವಂತೆ ಅಪರ ಆಯುಕ್ತರು (ಆಡಳಿತ) ರವರಿಗೆ ನಿರ್ದೇಶಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡುತ್ತ, ಪಾಲಿಕೆಯಲ್ಲಿನ ಸಿಬ್ಬಂದಿ ವರ್ಗದವರು ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸದೇ ಇದ್ದು ಹಾಗೂ ಸಮಯಪ್ರಜ್ಞೆ ಕಾರ್ಯತತ್ಪರತೆ ಇಲ್ಲದೆ ಇರುವುದರಿಂದ ಸಾರ್ವಜನಿಕ ವಲಯ ಹಾಗೂ ಮಾಧ್ಯಮಗಳಲ್ಲಿ ಪಾಲಿಕೆಯ ಬಗ್ಗೆ ಕಳಂಕ ತರುವಂತಹ ಅಭಿಪ್ರಾಯಗಳು ಮೂಡುತ್ತಿದ್ದು, ಈ ಹಿನ್ನೆಲೆಯಲ್ಲಿ ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರು ಪಾಲಿಕೆಯನ್ನು ತಮ್ಮ ಸ್ವಂತ ಸಂಸ್ಥೆ ಎಂಬ ಮನೋಭಾವದಿಂದ ಕಾರ್ಯನಿರ್ವಹಿಸಿದಲ್ಲಿ ಸಾರ್ವಜನಿಕ ವಲಯದಲ್ಲಿ ಪಾಲಿಕೆಯ ಕುರಿತಂತೆ ಉಂಟಾಗಿರುವ ಎಲ್ಲಾ ಕಳಂಕಗಳನ್ನು ನಿವಾರಿಸಲು ಸಾಧ್ಯವೆಂಬ ಅಂಶವನ್ನು ಮನದಟ್ಟು ಮಾಡಿಕೊಳ್ಳಲು ತಿಳಿಸುತ್ತಾ, ಪ್ರತಿಯೊಬ್ಬ ಸಿಬ್ಬಂದಿವರ್ಗದವರಾಗಲಿ, ಅಧಿಕಾರಿ ವರ್ಗದವರಾಗಲಿ ಶಿಸ್ತಿನಿಂದ ತಮ್ಮಗಳಿಗೆ ವಹಿಸಿರುವ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸತಕ್ಕದೆಂದು ತಿಳಿಸಿ, ಸಮಿತಿಯು ಪಾಲಿಕೆಯ ಎಲ್ಲಾ ವಲಯ ಹಾಗೂ ಮುಖ್ಯ ಕಛೇರಿಯ ಎಲ್ಲಾ ಇಲಾಖೆಗೂ ಪರಿಶೀಲನೆ ಕೈಗೊಳ್ಳುವುದಾಗಿ, ಆ ಸಂದರ್ಭದಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಶಿಸ್ತಿನ ಕ್ರಮವನ್ನು ಜರುಗಿಸಲಾಗುವುದೆಂದು ಎಚ್ಚರಿಸುತ್ತಾ, ಈ ಸಭೆಗೆ ಗೈರು ಹಾಜರಿಯಾಗಿರುವ ಅಧಿಕಾರಿಗಳಿಂದ ವಿವರಣೆ ಪಡೆಯಲು ತಿಳಿಸಿ ಪಾಲಿಕೆಯ ಆಡಳಿತದಲ್ಲಿ ಸುಧಾರಣೆಯನ್ನು ತರುವ ನಿಟ್ಟಿನಲ್ಲಿ ಸಮಿತಿಯ ಎಲ್ಲಾ ಸದಸ್ಯರುಗಳು ಪಕ್ಷಭೇದ ಮರೆತು ಸಹಕಾರಿಸಲು ತಿಳಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರುಗಳು ಹಾಗೂ ಅಧಿಕಾರಿಗಳಿಗೆ ವಂದನೆ ಅರ್ಪಿಸಿ ಸಭೆಯನ್ನು ಮುಕ್ತಾಯ ಗೊಳಿಸಿದರು.

ಅಧ್ಯಕ್ಷರು

ಸಿಬ್ಬಂದಿ ಮತ್ತು ಆಡಳಿತ ಸುಧಾರಣ ಸ್ಥಾಯಿ ಸಮಿತಿ

**ಪ್ರತಿಯನ್ನು:**
ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ವಿಶೇಷ ಕರ್ತವ್ಯಾಧಿಕಾರಿ ರವರಿಗೆ ಕಳುಹಿಸಿದೆ.
ಮಾನ್ಯ ಉಪ ಮಹಾಪೌರ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸಿದೆ.
ಮಾನ್ಯ ಆಯುಕ್ತರು ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
ಮಾನ್ಯ ಆಡಳಿತ ಪಕ್ಷದ ನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಜೆ.ಡಿ.ಎಸ್. ಪಕ್ಷದ ನಾಯಕರಿಗೆ ಮಾಹಿತಿಗಾಗಿ ಕಳುಹಿಸಿದೆ.
ಎಲ್ಲಾ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.